
ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 35 ಸೆಪ್ಟೆಂಬರ್ 5, 1982 ಬೆಲೆ 60 ಪೈಸೆ

ಇಪ್ಪತ್ತು ವರ್ಷಗಳಿಂದ ಜೈಲಲ್ಲಿ ಕೊಳೆಯುತ್ತಿರುವ ಕಾಮ್ರೇಡ್ ನೆಲ್ಸನ್ ಮ್ಯಾಂಡೆಲಾ



ತಾಯ್ನಾಡಿನ ಸ್ವಾತಂತ್ರ್ಯಕ್ಕಾಗಿ, ಮಾನವೀಯ ಹಕ್ಕುಗಳಿಗಾಗಿ, ಸಮಾನತೆಗಾಗಿ ತಲೆಯೆತ್ತಿದ್ದ ಕರಿಯರನ್ನು ದಮನಮಾರ್ಗದಿಂದ ಸದೆಬಡಿಯಲುದ್ದೇಶಿಸಿ ಹೋರಾಟದ ಮುಂಚೂಣಿಯಲ್ಲಿದ್ದ ನೆಲ್ಸನ್ ಮ್ಯಾಂಡೆಲಾರನ್ನು ದ. ಅಫ್ರಿಕಾದ ವರ್ಣೀಯ ಸರಕಾರ ಜೈಲಿಗೆ ತಳ್ಳಿ ಅಗಸ್ಟ್ 5, 1982 ಕ್ಕೆ ಇಪ್ಪತ್ತು ವರ್ಷಗಳಾದವು.

ಅನ್ಯಾಯ, ಅಮಾನವೀಯತೆಯ ಹೋರಾಟ ನಡೆಸಿದ್ದಕ್ಕಾಗಿ ಕಾಂ। ನೆಲ್ಸನ್ ಮ್ಯಾಂಡೆಲಾ ಹಾಗೂ ಅವರ ಸಂಗಾತಿಗಳಾದ ವಾಲ್ಟರ್ ಸಿಸಿಲೋ, ಅಹ್ಮದ್ ಕಾಥ್ರಡಾ, ಡೆನ್ನಿಸ್ ಗೋಲ್ಡ ಬರ್ಗ, ಲಿಯೋನಲ್ ಬರ್ಗಸ್ಟನ್ ಮುಂತಾದವರನ್ನು ಕುಖ್ಯಾತ ರೈವೊನಿಯಾ ಮೊಕದ್ದಮೆಯಲ್ಲಿ ಅಪಾದಿತರೆಂದು ಸಾರಿ ಜೀವಾವಧಿ ಶಿಕ್ಷೆಗೆ ಗುರಿಪಡಿಸಲಾಗಿತ್ತು.

ಅಂದಿನಿಂದ ಇಂದಿನವರೆಗೆ ಕಾಮ್ರೇಡ್ ಮ್ಯಾಂಡೆಲಾ ತಮ್ಮ ಸಹ ಕೈದಿಗಳೊಂದಿಗೆ ರೊಬಿನ್ ಜೈಲಿನಲ್ಲಿ ಕಲ್ಲುಕುಟ್ಟುತ್ತಾ, ವರ್ಣದ್ವೇಷಿ ಜೈಲು ವಾರ್ಡರುಗಳ ವಿರುದ್ಧ ಹೋರಾಡುತ್ತಾ, ತಮ್ಮ ಸಹ ಕೈದಿಗಳನ್ನು ವಾರ್ಡರುಗಳ ಗೇಲಿ, ಉಪಟಳ ಹಾಗೂ ಫ್ಯಾಸಿಸ್ಟ್ ಹಿಂಸೆಯಿಂದ ರಕ್ಷಿಸುತ್ತಾ ಕಳೆಯುತ್ತಿದ್ದಾರೆ. ಅವರಿಗೆ ರಾಜಕೀಯ ಕೈದಿಯ ಸ್ಥಾನಮಾನವನ್ನೂ ಕೊಟ್ಟಿಲ್ಲ.

ಒಂದಿಲ್ಲೊಂದು ರೀತಿಯಲ್ಲಿ ಪ್ರಪಂಚದಾದ್ಯಂತ ಬದುಕನ್ನು ಶೋಷಿಸುತ್ತಿರುವ ಶಕ್ತಿಗಳ ವಿರುದ್ಧ ಸಿಡಿದೆದ್ದ ಪ್ರಗತಿಪರ ಶಕ್ತಿಗಳ ಬಂಡಾಯದ ಸಂಕೇತವಾದ ಕಾಮ್ರೇಡ್ ಮ್ಯಾಂಡೇಲಾರನ್ನು ಬಿಡುಗಡೆಗೊಳಿಸಿ ಎಂಬ ಕೂಗು ಜಗತ್ತಿನಾದ್ಯಂತ ಮೊಳಗುತ್ತಿದೆ.

"ಸ್ವಾತಂತ್ರ್ಯವನ್ನು ಪಡೆಯುವ ಹಾದಿ ದುರ್ಗಮವಾಗಿದೆ. ಆದರೆ ನಮ್ಮ ಹೋರಾಟ ಮುಂದುವರೆಯುವುದು..." ಎಂದೊಮ್ಮೆ ಮ್ಯಾಂಡೆಲಾ ಹೇಳಿದ್ದರು. ಹೋರಾಟ ಮುಂದುವರೆದಿದೆ. ಕರಿಯರ ಬದುಕನ್ನು ಅಸಹನೀಯ ಗೊಳಿಸಿರುವ ವರ್ಣೀಯ ಸರಕಾರದ ವಿರುದ್ಧ ದ. ಅಫ್ರಿಕಾ ಜನತೆ ನಡೆಸಿರುವ ಧೀರ ಹೋರಾಟವನ್ನು ಜಗತ್ತಿನ ಪ್ರಗತಿಪರ ಶಕ್ತಿಗಳೆಲ್ಲ ಬೆಂಬಲಿಸಿವೆ.

ದೇಶದ ಎಲ್ಲ ಪುರೋಗಾಮಿ ಶಕ್ತಿಗಳು ಈ ಸಂದರ್ಭದಲ್ಲಿ, ಕಾಮ್ರೇಡ್ ಮ್ಯಾಂಡೆಲಾ ಮತ್ತು ಅವರ ಸಂಗಾತಿಗಳನ್ನು ಬಿಡುಗಡೆಗೊಳಿಸಲು ಧ್ವನಿಯೆತ್ತುವುದು ಅತ್ಯವಶ್ಯ.

ಭದ್ರಾವತಿ :

‘ಉಕ್ಕು ಕಾರ್ಮಿಕರ ಒಕ್ಕೂಟ’ಕ್ಕೆ ಭಾರೀ ಜಯ ಶ್ರೀಮತಿ ರಾಜಮ್ಮ ಅಧ್ಯಕ್ಷೆಯಾಗಿ ಆಯ್ಕೆ

ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಕಾರ್ಖಾನೆಯಲ್ಲಿ 30-8-82 ರಂದು ನಡೆದ ಚುನಾವಣೆಯಲ್ಲಿ ‘ಉಕ್ಕು ಕಾರ್ಮಿಕರ ಒಕ್ಕೂಟ’ದ ಅಭ್ಯರ್ಥಿ ಶ್ರೀಮತಿ ರಾಜಮ್ಮನವರು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಒಕ್ಕೂಟದ ಇನ್ನೊಬ್ಬ ಅಭ್ಯರ್ಥಿ ಶೇಖರಪ್ಪ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

13,000 ಕಾರ್ಮಿಕರು ಕೆಲಸ ಮಾಡುತ್ತಿರುವ ಈ ಕಾರ್ಖಾನೆಯಲ್ಲಿ ಪ್ರಸಕ್ತ ಎರಡು ಸಂಘಗಳು ಅಸ್ತಿತ್ವದಲ್ಲಿದ್ದು, ಎರಡೂ ಸಂಘಗಳು ಕಾರ್ಮಿಕರ ಹಿತಾಸಕ್ತಿಯ ಬಗ್ಗೆ ಕಿಂಚಿತ್ತೂ ಕಾಳಜಿ ವಹಿಸಿರಲಿಲ್ಲ. ಈ ಸಂದರ್ಭದಲ್ಲಿ ಸಿ.ಐ.ಟಿ.ಯು. ಬೆಂಬಲಿತ ಅಭ್ಯರ್ಥಿ ಶ್ರೀಮತಿ ರಾಜಮ್ಮ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದುದು ಹೊಸ ಬೆಳವಣಿಗೆಯ ಮುನ್ಸೂಚನೆಯಾಗಿದೆ.

ಕಾಂ। ಸೂರಿಯವರ ಭೇಟಿ:

ಬೊಕಾರೋ ಸ್ಟೀಲ್ ಸಿಟಿಯಲ್ಲಿ ಜುಲೈ 17 ಮತ್ತು 18 ರಂದು ಅಖಿಲ ಭಾರತ ಉಕ್ಕು ಕಾರ್ಮಿಕರ ಸಮಾವೇಶ ನಡೆದು ಆಗಸ್ಟ್ 25 ರಿಂದ 31ರವರೆಗೆ ಎಲ್ಲಾ ಉಕ್ಕು ಸ್ಥಾವರಗಳಲ್ಲಿ ಧರಣಿ ಹಾಗೂ ಪ್ರತಿಭಟನಾ ಪ್ರದರ್ಶನ ನಡೆಸಲು ಕರೆಕೊಟ್ಟಿತ್ತು.

ಈ ಹಿನ್ನೆಲೆಯಲ್ಲಿ ಭದ್ರಾವತಿಯ ಕಬ್ಬಿಣ ಕಾರ್ಖಾನೆಯ ಕಾರ್ಮಿಕರೂ ಅಖಿಲ ಭಾರತ ಉಕ್ಕು ಕಾರ್ಮಿಕರ ಸಮಾವೇಶದ ಕರೆಗೆ ಓಗೊಡುವಂತೆ ಮಾಡಲು ಪ್ರಯತ್ನಿಸಲು ಸಿ. ಐ. ಟಿ. ಯು. ರಾಜ್ಯ ಸಮಿತಿ ಅಧ್ಯಕ್ಷ ಕಾಂ। ಸೂರ್ಯನಾರಾಯಣರಾವ್ ಅವರು ಭದ್ರಾವತಿಗೆ ಭೇಟಿ ನೀಡಿದ್ದರು.

ಆಗಸ್ಟ್ 25 ರಂದು ಸಿ.ಐ.ಟಿ.ಯು. ಶಿವಮೊಗ್ಗಾ ಜಿಲ್ಲಾ ಸಮಿತಿಯ ಆಶ್ರಯದಲ್ಲಿ ಭದ್ರಾವತಿಯ ಕನಕಮಂಟಪದಲ್ಲಿ ಭಾರೀ ಬಹಿರಂಭ ಸಭೆ ನಡೆಯಿತು. ಎಡೆಬಿಡದೇ ಸುರಿಯುತ್ತಿದ್ದ ಮಳೆಯಲ್ಲೂ ಸಹಸ್ರಾರು ಕಾರ್ಮಿಕರು ಸಭೆಗೆ ಆಗಮಿಸಿದ್ದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಕಾಂ। ಸೂರಿಯವರು, ಕೇಂದ್ರ ಸರಕಾರದ ಹಾಗೂ ಆಡಳಿತ ಮಂಡಳಿಯ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ಉಕ್ಕು ಕಾರ್ಮಿಕರು ಒಗ್ಗಟ್ಟಾಗಿ ಹೋರಾಡಬೇಕಾದ ಅವಶ್ಯಕತೆಯ ಬಗ್ಗೆ ಒತ್ತಿ ಹೇಳಿದರು. ಸಭೆಯ ಅಧ್ಯಕ್ಷತೆಯನ್ನು ಕಾಂ। ಚಂದೂಕುಟ್ಟಿಯವರು ವಹಿಸಿದ್ದರು.

ಕಾಂ। ಸೂರಿಯವರು ಮುಂದುವರಿದು, ಉಕ್ಕು ಕಾರ್ಮಿಕರ ಬೇಡಿಕೆಗಳ ಬಗ್ಗೆ ಆದ ಹಿಂದಿನ ಒಪ್ಪಂದವೂ ಈ ತಿಂಗಳ (ಆಗಸ್ಟ್) ನಲ್ಲಿ ಮುಗಿದಿದ್ದು ಹೊಸ ಬೇಡಿಕೆಗಳ ಬಗ್ಗೆ ಉಕ್ಕು

(8ನೇ ಪುಟ ನೋಡಿ)

ಹೋರಾಟದ ಹಕ್ಕನ್ನು ಬಿಟ್ಟುಕೊಡುವುದಿಲ್ಲ

— ಪಿ. ರಾಮಮೂರ್ತಿ

[ಸಿ. ಐ. ಟಿ. ಯು. ಪ್ರಧಾನ ಕಾರ್ಯದರ್ಶಿ, ಸಿ. ಪಿ. ಐ. (ಎಂ) ಪಿ.ಬಿ. ಸದಸ್ಯ ಕಾಂ। ಪಿ. ರಾಮಮೂರ್ತಿಯವರು ಅಗಸ್ಟ್ 11 ರಂದು ‘ಕಾರ್ಮಿಕ ವಿವಾದ (ತಿದ್ದುಪಡಿ) ಬಿಲ್’ (Industrial Disputes (Amendment) Bill, 1982) ನ ಕುರಿತು ರಾಜ್ಯ ಸಭೆಯಲ್ಲಿ ಮಾಡಿದ ಭಾಷಣದ ವಿವರವನ್ನಿಲ್ಲಿ ಕೊಡಲಾಗಿದೆ.]

"ಈ ಕರಾಳ ಮಸೂದೆಯನ್ನು ವಿವರವಾಗಿ ಚರ್ಚಿಸುವ ಮೊದಲು ಒಂದು ಪ್ರಶ್ನೆ ಕೇಳಬೇಕಾಗಿದೆ. ಕಾರ್ಮಿಕ ಸಂಘಟನೆಗಳೊಂದಿಗೆ ಸಮಾಲೋಚಿಸಿದ ನಂತರವೇ ಶಾಸನವನ್ನು ತರುವುದಾಗಿ ಕಾರ್ಮಿಕ ಮಂತ್ರಿಗಳು ಲೋಕಸಭೆಯಲ್ಲಿ ಅಭಿಪ್ರಾಯಪಟ್ಟಿದ್ದರು. ಆದರೆ ಆ ರೀತಿ ಮಾಡಿದ್ದಾರೆಯೇ ? ಭಾರತೀಯ ಕಾರ್ಮಿಕ ಅಧಿವೇಶನ ಸೆಪ್ಟೆಂಬರ್‌ನಲ್ಲಿ ಸೇರುವ ಮುನ್ನವೇ ತುರ್ತಾಗಿ ಈ ಮಸೂದೆಯನ್ನು ಹೊರತರಲು ಕಾರಣವೇನು ?"

"ಕಾರ್ಮಿಕರನ್ನು ತೀವ್ರತರದ ದಬ್ಬಾಳಿಕೆಗೆ ಒಳಗುಮಾಡಿ, ಅವರು ಸದಾ ಸರ್ಕಾರದ ಬಂಡವಾಳಶಾಹಿಗಳ ಕೈಪಾಧೀನರಾಗಿರುವಂತೆ ಮಾಡುವ ಕ್ರೂರ ಸಾಧನವಿದು."

"ನಮ್ಮ ದೇಶದ ಸರ್ವೋಚ್ಚ ನ್ಯಾಯಾಲಯದ ‘ಉದ್ಯೋಗ’ದ ಖ್ಯಾಖ್ಯಾನವನ್ನೇ ಇಲ್ಲಿ ತಿರುವುಮುರುವು ಮಾಡಲಾಗಿದೆ. ಸರ್ಕಾರದ ಪ್ರಕಾರ ಅಧ್ಯಾಪಕರುಗಳು ‘ಸರಳ ಜೀವನ’ ಉಚ್ಚ ಚಿಂತನೆ’ಯಿಂದ ಮಾತ್ರ ತೃಪ್ತಿಪಡಬೇಕು ! ಕನಿಷ್ಟವಾದ ಜೀವನ ಸೌಲಭ್ಯಗಳು ಅವರಿಗೆ ಯಾಕೆ ಬೇಕು ? ಅಂತೆಯೇ ವೈದ್ಯರುಗಳು ಮತ್ತು ದಾದಿಯರು ಮಾನವೀಯ ದಯೆಯನ್ನು ಪ್ರಸರಿಸುವ ದೇವತೆಗಳಾಗಬೇಕು—ಅಂದ ಮೇಲೆ ತಮಗೆಷ್ಟು ಸಂಬಳ ಬರುತ್ತದೆ ಮುಂತಾದ ಲೌಕಿಕ ಚಿಂತನೆ ಯಾಕೆ ಮಾಡಬೇಕು—ಇದು ಸರ್ಕಾರದ ಮಹಾನ್ ಸಿದ್ಧಾಂತ. ಕೆಲವು ವಿಭಾಗದ ನೌಕರರನ್ನು ಅವರ ಹಕ್ಕುಗಳಿಂದ ವಂಚಿತರನ್ನಾಗಿ ಮಾಡುವ ಈ ಮಸೂದೆಯನ್ನು ವಿರೋಧಿಸಲೇಬೇಕು."

"ಇಂಗ್ಲೆಂಡಿನಲ್ಲಿ ಚರ್ಚಿಲ್‌ರು ಸರ್ಕಾರಿ ನೌಕರರು ಹಾಗೂ ಸಾರ್ವಜನಿಕ ಸೇವೆಯ ನೌಕರರ ಸಂಘಟನೆಯ ಹಕ್ಕನ್ನು ಕಸಿದುಕೊಳ್ಳುವ ಕಾನೂನು ತಂದಿದ್ದರು. ಆದರೆ ಇದೇ ಕಾರಣದಿಂದ ಅಲ್ಲಿನ ಕಾರ್ಮಿಕ ವರ್ಗ ಅವರನ್ನು ತಿರಸ್ಕರಿಸಿತು. ಅಲ್ಲಿ ಲೇಬರ್ ಪಾರ್ಟಿ ಅಧಿಕಾರಕ್ಕೆ ಬಂದ ಮೇಲೆ ಈ ಕಾನೂನನ್ನು ತೆಗೆದು ಹಾಕಲಾಯ್ತು. ಬೇರ್ಯಾವುದೇ ರಾಷ್ಟ್ರಗಳಲ್ಲಿ ಇಲ್ಲದ, ಕಾರ್ಮಿಕರನ್ನು ಸದೆಬಡಿಯಲು ಸಿದ್ಧವಾಗಿರುವ ಕಾನೂನನ್ನು ತರಲು ನಮ್ಮ ಸರ್ಕಾರ ಮುಂದಾಗಿದೆ."

"ಕಾರ್ಮಿಕರ ದೂರು ಸಮಸ್ಯೆಗಳನ್ನು ಇತ್ಯರ್ಥಗೊಳಿಸಲು ಹೊಸದೊಂದು ಅಧಿಕಾರ ರಚಿಸಲಾಗುವುದು. ಇದು ಆಡಳಿತ ವರ್ಗದಿಂದ ನೇಮಕವಾಗುವುದರಿಂದ ಕಾರ್ಮಿಕ ವರ್ಗಕ್ಕೆ ಯಾವ ರೀತಿಯ ನ್ಯಾಯ ದೊರಕಬಹುದು ? ಆಡಳಿತ ವರ್ಗದ ಮನುಷ್ಯ ಎಂದಾದರೂ ಕಾರ್ಮಿಕರಿಗೆ ಬೆಂಬಲವಾಗಿ ನಿಂತಾನೆಯೇ ?"

(8ನೇ ಪುಟ ನೋಡಿ)

"ಅನಗತ್ಯ ಅಪಪ್ರಚಾರಗಳನ್ನು ಸಿ. ಪಿ. ಐ. ನಿಲ್ಲಿಸಲಿ"

—ಎಂ. ಕೆ. ಭಟ್

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಘಟಕ ಮತ್ತು ಭಾರತ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಘಟಕಗಳು 1982 ನೇ ಇಸವಿ, ಜೂನ್ 11 ರಂದು ಬೆಂಗಳೂರಿನಲ್ಲಿ ನಡೆಸಿರುವ ಜಂಟಿ ಸಮಾವೇಶವು ತುಂಬಾ ಗೊಂದಲವನ್ನುಂಟು ಮಾಡಿದೆ. ಮತ್ತು ಈ ಎರಡು ಪಕ್ಷಗಳ ಮಧ್ಯೆ ಇರುವ ಮೂಲಭೂತ ಭಿನ್ನಾಭಿಪ್ರಾಯಗಳನ್ನು ಮರೆಮಾಡಿ, ಅದಕ್ಕೆ ಬದಲು ಹೆಚ್ಚಿಗೆ ಸಾಮೀಪ್ಯತೆ ಇದೆಯೆಂಬ ಭ್ರಮೆಯನ್ನೂ ಉಂಟು ಮಾಡುವಂತಿದೆ. ಸಮಾವೇಶದಲ್ಲಿ ಅಂಗೀಕರಿಸಲಾದ ಹೇಳಿಕೆಯು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜಕೀಯ ನಿಲುವಿಗೆ ತೀರಾ ವ್ಯತಿರಿಕ್ತವಾಗಿದೆ. ಸಿ. ಪಿ. ಐ. (ಎಂ) ನ ಪೊಲಿಟ್‌ಬ್ಯೂರೊವು ಸಕಾಲದಲ್ಲಿ ಮಧ್ಯ ಪ್ರವೇಶಮಾಡಿ, ಪಕ್ಷದ ರಾಜ್ಯ ಘಟಕವು ಮಾಡಿರುವ ರಾಜಕೀಯ ಮತ್ತು ಸಂಘಟನಾ ತಪ್ಪುಗಳನ್ನು ತೋರಿಸಿಕೊಟ್ಟಿತು. ಪಕ್ಷದ ಪೊಲಿಟ್‌ಬ್ಯೂರೊವು ಕೊಟ್ಟಿರುವ ಅಭಿಪ್ರಾಯ ಮತ್ತು ಮಾರ್ಗದರ್ಶನ ಹಾಗೂ ಮಾಡಿರುವ ಟೀಕೆಗಳನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿ ಸೆಕ್ರೆಟಾರಿಯೆಟ್ ಮತ್ತು ರಾಜ್ಯ ಸಮಿತಿಗಳು ಸಂಪೂರ್ಣವಾಗಿ ಒಪ್ಪಿಕೊಂಡಿವೆ. ಪೊಲಿಟ್‌ಬ್ಯೂರೊವು ಮಾಡಿರುವ ಸಕಾಲದ ಮಧ್ಯ ಪ್ರವೇಶದ ಬಗ್ಗೆ ಪಕ್ಷದ ರಾಜ್ಯ ಸಮಿತಿ ಸೆಕ್ರೆಟಾರಿಯೆಟ್ ಮತ್ತು ರಾಜ್ಯ ಸಮಿತಿ ತಮ್ಮ ಸಂತಸವನ್ನು ವ್ಯಕ್ತಪಡಿಸಿವೆ.

ಸಿ. ಪಿ. ಐ. (ಎಂ) ನ ಪೊಲಿಟ್‌ಬ್ಯೂರೊವು ಮಧ್ಯ ಪ್ರವೇಶಮಾಡಿ ಪಕ್ಷದ ರಾಜ್ಯ ಘಟಕವು ಮಾಡಿರುವ ತಪ್ಪನ್ನು ತೋರಿಸಿಕೊಟ್ಟು ತಿದ್ದಿರುವುದರ ಬಗ್ಗೆ ಪೊಲಿಟ್‌ಬ್ಯೂರೋವನ್ನು ಮತ್ತು ಸಿ. ಪಿ. ಐ (ಎಂ) ಪ್ರಧಾನ ಕಾರ್ಯದರ್ಶಿಯವರನ್ನು ಸಿ. ಪಿ. ಐ. ಯ ರಾಜ್ಯ ಮಂಡಳಿ ಮತ್ತು ಅದರ ಕಾರ್ಯದರ್ಶಿಯವರಾದ ಎಂ. ಎಸ್. ಕೃಷ್ಣನ್ ಟೀಕಿಸಿದ್ದಾರೆ ಇದು ಸಿ. ಪಿ. ಐ. ಗೆ ಸಂಬಂಧಿಸಿದ ವಿಚಾರವೇ ಅಲ್ಲ. ಸಿ.ಪಿ.ಐ. (ಎಂ) ನ ಪೊಲಿಟ್‌ಬ್ಯೂರೊವನ್ನು ಮತ್ತು ಅದರ ಪ್ರಧಾನ ಕಾರ್ಯದರ್ಶಿಯವರನ್ನು ಟೀಕಿಸುವುದರ ಮೂಲಕ ಸಿ.ಪಿ.ಐ.ಯು ಅನಗತ್ಯ ಕೆಲಸವನ್ನು ಮಾಡಿದೆ ಮತ್ತು ಕುತ್ಸಿತ ಪ್ರಚಾರವನ್ನು ಎಸಗುವುದರ ಮೂಲಕ ತನ್ನನ್ನು ಬಹಳ ಕೀಳುಮಟ್ಟಕ್ಕಿಳಿಸಿಕೊಂಡಿದೆ. ಪಕ್ಷದ ಕೇಂದ್ರ ಮುಖಂಡತ್ವದೊಂದಿಗೆ ಸರಿಯಾಗಿ ಸಮಾಲೋಚಿಸದೆ ಜಂಟೀ ಸಮಾವೇಶವನ್ನು ಮಾಡುವುದರ ಮೂಲಕ ಸಿ. ಪಿ. ಐ (ಎಂ) ರಾಜ್ಯ ಘಟಕವು ದೊಡ್ಡ ತಪ್ಪನ್ನು ಎಸಗಿದೆ. ಈ ಸಂಘಟನಾ ತಪ್ಪಿನೊಂದಿಗೆ ಪಕ್ಷದ ರಾಜಕೀಯ ನಿಲುವಿಗೆ ತೀರಾ ವ್ಯತಿರಿಕ್ತವಾದ ಹೇಳಿಕೆಯನ್ನೂ ಒಪ್ಪಿಕೊಂಡು ಸಿ. ಪಿ. ಐ. (ಎಂ) ರಾಜ್ಯ ಘಟಕವು ಇನ್ನೂ ದೊಡ್ಡ ತಪ್ಪನ್ನೆಸಗಿದೆ. ಇಂತಹ ಸಂದರ್ಭದಲ್ಲಿ ಪಕ್ಷದ ಪೊಲಿಟ್‌ಬ್ಯೂರೊವು ಮಧ್ಯ ಪ್ರವೇಶ ಮಾಡಿರುವುದು ಸರಿಯಾದ ಕ್ರಮವಾಗಿದೆ. ಪೊಲಿಟ್‌ಬ್ಯೂರೊ ಮತ್ತು ಕೇಂದ್ರ ಮುಖಂಡತ್ವವು ಹಾಗೆ ಮಾಡಲೇಬೇಕು. ಕೇಂದ್ರೀಕೃತ ಪ್ರಜಾಪ್ರಭುತ್ವವಾದದ ನಿಯಮಗಳ ಆಧಾರದಲ್ಲಿ ಕೆಲಸ ಮಾಡುವ ಸಿ ಪಿ ಐ. (ಎಂ)ನ ರಾಜ್ಯ ಸಮಿತಿಯು ಪೊಲಿಟ್‌ಬ್ಯೂರೊದ ಮಧ್ಯ ಪ್ರವೇಶವನ್ನು ಸಂತಸದಿಂದ ಸ್ವಾಗತಿಸಿದೆ. ಜಂಟೀ ಸಮಾವೇಶದಲ್ಲಿ ಅಂಗೀಕರಿಸಲ್ಪಟ್ಟ ಹೇಳಿಕೆಯೊಂದಿಗೆ ತನಗಿದ್ದ ಸಂಬಂಧವನ್ನು ಸಿ. ಪಿ. ಐ. (ಎಂ) ರಾಜ್ಯ ಘಟಕವು ಕಡಿದು ಹಾಕಿಕೊಂಡಿದೆ. ಆದರೆ ಅದೇ ಸಂದರ್ಭದಲ್ಲಿ ಜನತೆಯನ್ನು ಬಾಧಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕಾಗಿ ಜಂಟೀ ಹೋರಾಟಗಳನ್ನು ನಡೆಸುವುದಕ್ಕೆ ತಾನು ಸಿದ್ಧವಿರುವುದಾಗಿಯೂ ಪಕ್ಷದ ರಾಜ್ಯ ಘಟಕವು ಸಿ ಪಿ ಐ.ಗೆ ತಿಳಿಸಿದೆ.

"ಇತ್ತೀಚೆಗೆ ಜರುಗಿದ ಉಭಯ ಕಮ್ಯುನಿಸ್ಟ್ ಪಕ್ಷಗಳ ರಾಜ್ಯ ಮಟ್ಟದ ರಾಜಕೀಯ ಸಮಾವೇಶ ಒಂದು ಉತ್ತಮ ಹೆಜ್ಜೆ. ಇದರ ಕುರಿತು ಮಾರ್ಕ್ಸಿಸ್ಟ್ ಪಕ್ಷದ ಪೊಲಿಟ್‌ಬ್ಯೂರೊ ಹಾಗೂ ಅದರ ಪ್ರಧಾನ ಕಾರ್ಯದರ್ಶಿಯವರು ವಿರೋಧ ವ್ಯಕ್ತಪಡಿಸಿರುವುದು ವಿಷಾದಕರ. ಉತ್ತಮ ನಿಟ್ಟಿನಲ್ಲಿ ಕೈಗೊಂಡ ಇಂತಹ ಕ್ರಮವು ಟೀಕೆಗೆ ಬಲಿಯಾಗಿರುವುದು ದುರದೃಷ್ಟಕರ. ಆದರೆ ಸಾಮಾನ್ಯ ವಿಷಯಗಳ ಬಗ್ಗೆ ಜಂಟಿ ಕಾರ್ಯಾಚರಣೆ ನಡೆಸಲು ಸಿದ್ಧವೆಂಬ ಮಾರ್ಕ್ಸಿಸ್ಟ್ ಪಕ್ಷದ ರಾಜ್ಯ ಸಮಿತಿಯ ಹೇಳಿಕೆ ಸ್ವಾಗತನೀಯ. ಸಾಮಾನ್ಯ ವಿಷಯಗಳ ಬಗ್ಗೆ ಎರಡು ಎಡ ಪಕ್ಷಗಳ ಜಂಟಿ ಹೋರಾಟಗಳಿಂದ ಮಾತ್ರವೇ ಪ್ರಜಾಪ್ರಭುತ್ವ ಶಕ್ತಿಗಳನ್ನು ಕಾರ್ಯಾಚರಣೆಗೆ ಆಕರ್ಷಿಸಿ ರಾಜ್ಯದಲ್ಲಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಬದಲಿಯನ್ನು ಕಟ್ಟುವುದು ಸಾಧ್ಯ..." ಎಂದು ಸಿ ಪಿ ಐ ರಾಜ್ಯ ಮಂಡಲಿಯೂ, ಅದಕ್ಕೆ ಮೊದಲು ಅದರ ರಾಜ್ಯ ಸೆಕ್ರೆಟಾರಿಯೆಟ್ ಹೇಳಿವೆ

ಆದರೆ ಸಿ ಪಿ ಐ ಯು ಹೇಳುವಂತೆ ಎರಡು ಪಕ್ಷಗಳು ನಡೆಸಿರುವಂತಹ ಜಂಟಿ ಸಮಾವೇಶವು ಉತ್ತಮ ಹೆಜ್ಜೆಯಲ್ಲ. ಬದಲು ಒಂದು ತಪ್ಪು ಕ್ರಮವಾಗಿದೆ. ಏಕೆಂದರೆ ಈ ರೀತಿಯ ಸಮಾವೇಶವು ಎರಡು ಪಕ್ಷಗಳ ಮಧ್ಯೆ ಇರುವ ಮೂಲಭೂತ ಭಿನ್ನಾಭಿಪ್ರಾಯಗಳನ್ನು ಮರೆಮಾಡಿ, ಎರಡೂ ಪಕ್ಷಗಳು ಒಂದಾಗುವಷ್ಟು ಸಮೀಪ ಬಂದಿವೆ ಎಂಬ ಭ್ರಮೆಯನ್ನು ಹುಟ್ಟಿಸುತ್ತದೆ. ಸಿ.ಪಿ.ಐ. ಮುಂದಾಳುಗಳು "ಐಕ್ಯ ಕಾರ್ಯಾಚರಣೆಯನ್ನು ಬೆಳಸಿಕೊಂಡರೆ ಸಾಕು. ಅದು ರಾಜಕೀಯ ಹಾಗೂ ಸಂಘಟನಾ ಏಕತೆಗೆ ನಮ್ಮನ್ನು ಕೊಂಡೊಯ್ಯುವುದು" ಎಂಬ ಭ್ರಮೆಯ ಮಾತುಗಳನ್ನು ಹೇಳುತ್ತಾರೆ. ಆದರೆ ವಾಸ್ತವಾಂಶವೇನೆಂದರೆ ಕಮ್ಯುನಿಸ್ಟ್ ಚಳುವಳಿಯ ವಿಭಜನೆಗೆ ಕಾರಣವಾದ ಸೈದ್ಧಾಂತಿಕ-ರಾಜಕೀಯ ತಪ್ಪುಗಳನ್ನು ಮುಕ್ತ ಹಾಗೂ ಬಿಚ್ಚು ಮನಸ್ಸಿನ ಚರ್ಚೆಗೆ ಒಳಪಡಿಸದೆ ಮತ್ತು ಆ ಮೂಲಕ ಈ ಹಿಂದೆ ಘಟಿಸಿದ ತಪ್ಪುಗಳನ್ನು ಸರಿಪಡಿಸದೆ ಕಮ್ಯುನಿಸ್ಟ್ ಐಕ್ಯ ಸಾಧ್ಯವಾಗಲಾರದು. ಸಿ. ಪಿ. ಐ. ಮುಂದಾಳುಗಳ ಪಾಲಿಗೆ ಮಾತ್ರ ಇದೊಂದು ತೀರಾ ನೋವಿನ ಕ್ರಿಯೆಯಾಗುತ್ತದೆ; ಯಾಕೆಂದರೆ ಅವರು ಅನುಸರಿಸಿದ ಧೋರಣೆ ಬಹುಪಾಲು ತಪ್ಪಾಗಿದೆ ಎಂದು ಇತಿಹಾಸ ತೋರಿಸಿಕೊಟ್ಟಿದೆ ಹಾಗಾಗಿ ಅವರು ಈ ನೋವಿನ ಕೆಲಸದಿಂದ ತಪ್ಪಿಸಿಕೊಳ್ಳುವ ಸಲುವಾಗಿ 'ಕಮ್ಯುನಿಸ್ಟ್ ಏಕೀಕರಣ' ಇನ್ನೇನು ಸಾಧಿಸಲ್ಪಡುತ್ತಿದೆ ಎಂಬ ಭ್ರಮೆಯನ್ನು ತಮ್ಮ ಸದಸ್ಯರ ಮಧ್ಯೆ ಸೃಷ್ಟಿಸಲು ಪ್ರಯತ್ನಿಸುತ್ತಿದ್ದಾರೆ. ಇನ್ನು ಜಂಟಿ ಕಾರ್ಯಾಚರಣೆಯ ಬಗ್ಗೆ ಹೇಳುವುದಿದ್ದರೆ ಸಿ ಪಿ. ಐ. (ಎಂ) ರಾಜ್ಯ ಸಮಿತಿಗೆ ಒಂದು ಪ್ರತ್ಯೇಕ ಧೋರಣೆ ಏನೂ ಇಲ್ಲ. ಪಕ್ಷವು ಸತತವಾಗಿ ಅನುಸರಿಸಿಕೊಂಡು ಬಂದಿರುವ ಅಖಿಲ ಭಾರತ ಮಟ್ಟದ ಧೋರಣೆ ಮತ್ತು ಪೊಲಿಟ್‌ಬ್ಯೂರೊದ ಮಾರ್ಗದರ್ಶನದಿಂದಲೇ ಸಮಾವೇಶವು ಅಂಗೀಕರಿಸಿದ ಹೇಳಿಕೆಯಿಂದ ಪ್ರತ್ಯೇಕಿಸಿಕೊಳ್ಳುವುದಾದರೂ ಜಂಟಿ ಹೋರಾಟಗಳನ್ನು ನಡೆಸಲು ನಾವು ಸಿದ್ಧವಿರುವುದಾಗಿ ಸಿ.ಪಿ ಐ ಗೆ ತಿಳಿಸಿರುವುದಾಗಿದೆ. ಈ ಬಗ್ಗೆ ಸಿ. ಪಿ ಐ (ಎಂ) ರಾಜ್ಯ ಸಮಿತಿಗೆ ಸಿ.ಪಿ.ಐ ಯಿಂದ ಹೊಗಳಿಕೆ ಬೇಕಿಲ್ಲ. ಮತ್ತು ಪೊಲಿಟ್‌ಬ್ಯೂರೊವನ್ನು ದೂಷಿಸಿ ರಾಜ್ಯ ಸಮಿತಿಯನ್ನು ಹೊಗಳುವುದರಿಂದ ಸಿ.ಪಿ ಐ ಗೆ ಏನೂ ಲಾಭ ಸಿಗಲಿಕ್ಕಿಲ್ಲ.

ಜಂಟಿ ಸಮಾವೇಶವನ್ನು ಮಾಡಿರುವುದು ತಪ್ಪು. ಸಿ. ಪಿ. ಐ. (ಎಂ)ನ ರಾಜಕೀಯ ನಿಲುವಿಗೆ ತೀರಾ ವ್ಯತಿರಿಕ್ತವಾದ ಹೇಳಿಕೆಯೊಂದಿಗೆ ಪಕ್ಷವನ್ನು ಸೇರಿಸಿಕೊಂಡಿದ್ದು ತೀರಾ ತಪ್ಪು. ಸಮಾವೇಶವು ಅಂಗೀಕರಿಸಿರುವ ಹೇಳಿಕೆಯು, ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಧೋರಣೆಗಳ ಬಗ್ಗೆಯೂ ಮತ್ತು ಪ್ರಚಲಿತ ತಂತ್ರಗಳ (Curent Tactics) ಕುರಿತು, ಸಂಯುಕ್ತ ರಂಗದ ಕುರಿತು ಸಿ ಪಿ. ಐ. (ಎಂ)ಗೆ ಇರುವ ಮಾರ್ಕ್ಸ್‌ವಾದಿ—ಲೆನಿನ್‌ವಾದಿ ನಿಲುವಿಗೆ ವಿರುದ್ಧವಾಗಿ ಇದೆ. ಅಂತರರಾಷ್ಟ್ರೀಯ ಪರಿಸ್ಥಿತಿ ಕುರಿತು ಹೇಳುವುದಿದ್ದರೆ ಜಗತ್ತಿನ ಕಮ್ಯುನಿಸ್ಟ್ ಚಳುವಳಿಯ ಬಗ್ಗೆ ಸಿ.ಪಿ ಐ (ಎಂ) ಮತ್ತು ಸಿ.ಪಿ.ಐ.ಗೆ ಮೂಲಭೂತ ಭಿನ್ನಾಭಿಪ್ರಾಯಗಳಿವೆ. ಸಿ.ಪಿ.ಐ (ಎಂ) ಕಾರ್ಮಿಕ ವರ್ಗದ ಅಂತರರಾಷ್ಟ್ರೀಯತೆ ಮತ್ತು ಸಮಾಜವಾದದ ಪಕ್ಷಪಾತಿ. ಸಿ ಪಿ ಐ. (ಎಂ) ಸ್ವತಂತ್ರ ನಿಲುವೆಯನ್ನು ಅನುಸರಿಸುವ ಕಮ್ಯುನಿಸ್ಟ್ ಪಕ್ಷ. ಜಗತ್ತಿನ ಎಲ್ಲ ಕಮ್ಯುನಿಸ್ಟ್ ಪಕ್ಷಗಳು ಸಮಾನತೆಯ ಆಧಾರದಲ್ಲಿ ಸೌಹಾರ್ದ ಸಂಬಂಧಗಳ ಮೂಲಕ ಜಗತ್ತಿನ ಕಮ್ಯೂನಿಸ್ಟ್ ಚಳುವಳಿಯ ಐಕ್ಯತೆಯನ್ನು ಸಾಧಿಸಬೇಕೆನ್ನುವುದು ಸಿ ಪಿ ಐ. (ಎಂ)ನ ಆಶಯ. ಜಾಗತಿಕ ಕಮ್ಯುನಿಸ್ಟ್ ಚಳುವಳಿಯ ಸೋದರ ಪಕ್ಷಗಳು ತಮ್ಮ ಸೌಹಾರ್ದ ಟೀಕೆಯ ಮೂಲಕ ಒಬ್ಬರು ಇನ್ನೊಬ್ಬರನ್ನು ತಿದ್ದಿಕೊಳ್ಳುವಂತೆ ಮಾಡಬೇಕು. ಚೀನದ ಕಮ್ಯುನಿಸ್ಟ್ ಪಕ್ಷವನ್ನು ಟೀಕಿಸುವಾಗ ಅಥವಾ ಜಗತ್ತಿನ ಇನ್ನಾವುದೇ ಕಮ್ಯುನಿಸ್ಟ್ ಪಕ್ಷವನ್ನು ಟೀಕಿಸುವಾಗ ಸಿ.ಪಿ ಐ. (ಎಂ) ಇದೇ ದೃಷ್ಟಿಕೋನ ಹೊಂದಿರುತ್ತದೆ. ಇದು ಮಾರ್ಕ್ಸ್‌ವಾದಿ-ಲೆನಿನ್‌ವಾದಿ ನಿಲುವು. ಸಿ ಪಿ.ಐ. ನ ಧೋರಣೆ ಈ ತತ್ವಕ್ಕೆ ವಿರುದ್ಧವಾಗಿದೆ. ಸಿ ಪಿ.ಐ ನ ಮುಂದಾಳುಗಳು ಅಮೇರಿಕಾ ಸಾಮ್ರಾಜ್ಯಶಾಹಿಯನ್ನು ಮತ್ತು ಸಮಾಜವಾದಿ ಚೀನಾವನ್ನು ಒಂದೇ ಆಗಿ ನೋಡುತ್ತಾರೆ. ಇದು ಕಾರ್ಮಿಕ ವರ್ಗದ ಅಂತರರಾಷ್ಟ್ರೀಯತೆಯ ತತ್ವವನ್ನು ಬಲಿಕೊಡುವುದೆಂದರ್ಥ. ಸಿ. ಪಿ ಐ.ಯೊಂದಿಗೆ ಸೇರಿ ಚೀನಾವನ್ನು ಟೀಕಿಸುವುದಕ್ಕೂ ಅದೇ ಅರ್ಥ. ಈ ರೀತಿಯ ಕ್ರಮವು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಜಾಗತಿಕ ಕಮ್ಯುನಿಸ್ಟ್ ಚಳುವಳಿಯ ಬಗೆಗೂ, ಕಾರ್ಮಿಕ ವರ್ಗದ ಅಂತರರಾಷ್ಟ್ರೀಯತೆಯ ಬಗೆಗೂ ಇರುವ ನಿಲುವಿಗೆ ವ್ಯತಿರಿಕ್ತವಾದ ಅಭಿಪ್ರಾಯವನ್ನು ಕೊಡುತ್ತದೆ. ಜಂಟಿ ಹೇಳಿಕೆಯು ಈ ರೀತಿಯ ತಪ್ಪು ಅಭಿಪ್ರಾಯವನ್ನು ಕೊಡುವಂತಿದೆ.

ರಾಷ್ಟ್ರೀಯ ಪರಿಸ್ಥಿತಿಯ ಬಗ್ಗೆ ಹೇಳುವುದಿದ್ದರೆ ಇಂದಿರಾ ಕಾಂಗ್ರೆಸ್ಸಿನ ಸರ್ವಾಧಿಕಾರದ ವಿರುದ್ಧ, ವಿಶಾಲ ತಳಹದಿಯ ಸರ್ವಾಧಿಕಾರ ವಿರುದ್ಧ ಪ್ರತಿರೋಧವನ್ನು ಬೆಳೆಸುವುದೂ, ಮತ್ತು ಆಳುವ ವರ್ಗಗಳ ಅಂದರೆ ಭೂಮಾಲಿಕ-ಬಂಡವಾಳಶಾಹಿ ವರ್ಗಗಳಿಗೆ ವಿರುದ್ಧವಾದ ಧೋರಣೆ ಮತ್ತು ಹೋರಾಟಗಳ ಮೂಲಕ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಒಗ್ಗಟ್ಟನ್ನು ಬೆಳೆಸಿ ಒಂದು ಎಡ ಮತ್ತು ಪ್ರಜಾಪ್ರಭುತ್ವ ಬದಲಿಯನ್ನು ಬೆಳೆಸುವುದೂ ಸಿ.ಪಿ ಐ.(ಎಂ)ನ ಧೋರಣೆಯಾಗಿದೆ ಸರ್ವಾಧಿಕಾರ ವಿರುದ್ಧದ ವಿಶಾಲ ತಳಹದಿಯ ಪ್ರತಿರೋಧವೂ ಎಡ ಮತ್ತು ಪ್ರಜಾಪ್ರಭುತ್ವ ಬದಲಿಯನ್ನು ಕಟ್ಟುವುದೂ ಎರಡು ಬೇರೆ ಬೇರೆಯಾಗಿದ್ದರೂ ಒಂದನ್ನು ಬಿಟ್ಟು ಇನ್ನೊಂದು ಇಲ್ಲ. ಎರಡಕ್ಕೂ ಸಂಬಂಧವಿದೆ. ಆದರೆ ಸಿ.ಪಿ.ಐ.ನ ದೃಷ್ಟಿಯಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಕೂಟವನ್ನು ಕಟ್ಟುವ ಒಂದೇ ಕಾರ್ಯಕ್ರಮವಿದೆ, ಇಂದಿರಾ ಕಾಂಗ್ರೆಸ್ಸಿನ ಸರ್ವಾಧಿಕಾರ ಕ್ರಮಗಳ ವಿರುದ್ಧ ವಿಶಾಲ ತಳಹದಿಯ ಪ್ರತಿರೋಧವನ್ನು ಬೆಳೆಸದೆ, ಕೇವಲ ಎಡ ಮತ್ತು ಪ್ರಜಾಪ್ರಭುತ್ವ ಕೂಟ ಕಟ್ಟುವ ಮಾತು ಇಂದಿರಾ ಗಾಂಧಿಗೇ ಸಹಾಯಕವಾಗುತ್ತದೆ. ಇದನ್ನು ಸಿ.ಪಿ.ಐ.(ಎಂ) ಒಪ್ಪುವುದು ಸಾಧ್ಯವೇ ಇಲ್ಲ. ಜಂಟಿ ಹೇಳಿಕೆಯಲ್ಲಿ ಸರ್ವಾಧಿಕಾರ ವಿರೋಧ ಹೋರಾಟಕ್ಕೆ ಮಹತ್ವ ಕೊಡದಿರುವುದು ಸಿ. ಪಿ. ಐ. (ಎಂ)ನ ಧೋರಣೆಗೆ ವಿರುದ್ಧವಾಗಿದೆ.

ಇನ್ನು ಸಿ. ಪಿ. ಐ. ಯು ಹೇಳುವ "ಎಡ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳ ಬದಲಿ"ಗೂ ಸಿ.ಪಿ.ಐ. (ಎಂ) ಹೇಳುವ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಒಗ್ಗಟ್ಟಿನ ಬದಲಿಗೂ ಅಜಗಜಾಂತರ ವ್ಯತ್ಯಾಸವಿದೆ. ಸಿ.ಪಿ.ಐ ಯ ರಾಜ್ಯ ಮಂಡಲಿಯ ಮುಖ ಪತ್ರದ (ಕೆಂಬಾವುಟದ) ಆಗಸ್ಟ್ 22, 1982 ನೇ ಸಂಚಿಕೆಯ ಮುಖ ಪುಟದಲ್ಲಿ ಬರೆದುದುದರಿಂದ ಇದು ಸ್ಪಷ್ಟವಾಗುತ್ತದೆ. "ಎಲ್ಲ ಪಕ್ಷಗಳ ಐಕ್ಯ ಎಂಬ ವಾದವನ್ನು ನಾವು ಒಪ್ಪುವುದಿಲ್ಲ. ಇಂತಹ ಐಕ್ಯದ ಕುರಿತಾದ ಇತಿಹಾಸ ನಮಗೆ ತಿಳಿದಿದೆ.......ಆದುದರಿಂದಲೇ ಭಾಜಪದ ಹೊರತಾಗಿ ಉಳಿದೆಲ್ಲ ಎಡ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳ ಬದಲಿಯೊಂದನ್ನು ನಿರ್ಮಿಸುವುದು ನಮ್ಮ ಗುರಿ ...." ಅಂದರೆ ಸಿ.ಪಿ ಐ.ಯ ದೃಷ್ಟಿಯಲ್ಲಿ ಬಾಜಪದ ಹೊರತು ಉಳಿದೆಲ್ಲ ಬಂಡವಾಳಶಾಹಿ – ಭೂಮಾಲಿಕ ಪಕ್ಷಗಳು ಮತ್ತು ಎಡ ಪಕ್ಷಗಳು ಒಟ್ಟಿಗೆ ಸೇರಿಕೊಂಡು ರಚಿಸುವ ರಂಗವು ಎಡ ಮತ್ತು ಪ್ರಜಾಪ್ರಭುತ್ವ ಕೂಟವಾಗುತ್ತದೆ! ಮೇಲಾಗಿ ಸಿ.ಪಿ ಐ. ಮುಂದಾಳುಗಳ ಪಾಲಿಗೆ ಎಡ ಮತ್ತು ಪ್ರಜಾಪ್ರಭುತ್ವವಾದಿ ಐಕ್ಯವೆಂದರೆ ಮುಖ್ಯವಾಗಿ ಚುನಾವಣಾ ಮತ್ತು ಪಾರ್ಲಿಮೆಂಟರಿ ಮಟ್ಟದ ಒಗ್ಗಟ್ಟಾಗಿರುತ್ತದೆ. ಜಂಟಿ ಹೇಳಿಕೆಯಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಒಗ್ಗಟ್ಟಿನ ಬಗ್ಗೆ ಮಾತನಾಡುತ್ತಾ ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ವಿಧಾನ ಸಭೆಯ ಒಳಗೆ ಸಿ ಪಿ. ಐ., ಜನತಾ ಪಕ್ಷ ಮತ್ತು ಕ್ರಾಂತಿರಂಗ ರಚಿಸಿಕೊಂಡಿರುವ ಸಂಯುಕ್ತ ಪ್ರಜಾಪ್ರಭುತ್ವರಂಗವನ್ನು ಸ್ವಾಗತಿಸಿರುವುದೂ, ಈ ರಂಗವನ್ನು ವಿಧಾನ ಸಭೆಯ ಹೊರಗೂ ವಿಸ್ತರಿಸಿ ಸಿ.ಪಿ ಐ (ಎಂ) ಮತ್ತು ಲೋಕದಳವನ್ನು ಸೇರಿಸಿಕೊಳ್ಳಬೇಕೆಂದಿರುವುದೂ ಎಡ ಮತ್ತು ಪ್ರಜಾಪ್ರಭುತ್ವ ಕೂಟವೆಂದರೆ ಸಿ ಪಿ ಐ. ಯು ಅರ್ಥೈಸುವಂತೆಯೇ ಆಗುತ್ತದೆ. ಆದರೆ ಸಿ. ಪಿ. ಐ. (ಎಂ) ದೃಷ್ಟಿಯಲ್ಲಿ ಎಡ ಮತ್ತು ಪ್ರಜಾಪ್ರಭುತ್ವರಂಗ

(7ನೇ ಪುಟ ನೋಡಿ)

ಕಾಂ| ಬಾಲು — ಒಂದು ನೆನಪು

—ಬಿ. ಟಿ. ಆರ್

[ಸಿ. ಪಿ. ಐ. (ಎಂ) ಪೊಲಿಟ್‌ಬ್ಯೂರೋ ಸದಸ್ಯ, ತಮಿಳ್ನಾಡು ಘಟಕದ ಕಾರ್ಯದರ್ಶಿ ಕಾಂ| ಎ. ಬಾಲಸುಬ್ರಮಣ್ಯಂ ನಮ್ಮನ್ನಗಲಿ ಇಂದಿಗೆ (ಸೆಪ್ಟೆಂಬರ್ 5) ಸರಿಯಾಗಿ ಒಂದು ವರ್ಷವಾಯಿತು. ತಮ್ಮ ಯೌವನದ ದಿನಗಳಿಂದಲೇ ಶೋಷಿತರಿಗಾಗಿ ತಮ್ಮ ಜೀವನವನ್ನು ಮುಡಿಪಿಟ್ಟಿದ್ದ ಕಾಂ| ಎ. ಬಿ. ಯವರ ನಿಧನ ಪಕ್ಷಕ್ಕೊಂದು ತುಂಬಲಾರದ ನಷ್ಟ.

ಕಾಂ| ಎ ಬಾಲಸುಬ್ರಮಣ್ಯಂ ನಿಧನರಾದ ಸಂದರ್ಭದಲ್ಲಿ ಅವರನ್ನು ದೀರ್ಘಕಾಲದಿಂದ ಬಲ್ಲ ಕಾಂ| ಬಿ. ಟಿ. ಆರ್. ಅವರು ಕಾಂ| ಎ. ಬಿ. ಯವರ ಕುರಿತು ಒಂದು ಆತ್ಮೀಯ ಪರಿಚಯಾತ್ಮಕ ಲೇಖನ (ಪಿ. ಡಿ.— ಸೆಪ್ಟೆಂಬರ್ 13, 1981) ವನ್ನು ಬರೆದಿದ್ದರು.

ಕಾಂ| ಎ. ಬಿ. ನಿಧನರಾದ ಒಂದು ವರ್ಷವಾದ ಈ ಸಂದರ್ಭದಲ್ಲಿ ಕಾಂ| ಬಿ. ಟಿ. ಆರ್ ರ ಲೇಖನ ಪ್ರಕಟಿಸುತ್ತಿದ್ದೇವೆ. ಕಾಂ| ಎ. ಬಿ. ಯವರ ನೆನಪು ನಮ್ಮಲ್ಲಿ ಹಸಿರಾಗಿರಲಿ. ಅವರ ತ್ಯಾಗ-ಸಾಧನೆ ಇವು ನಮಗೆಲ್ಲ ದಾರಿ ದೀಪವಾಗಲಿ.]

ನಮ್ಮ ಪಕ್ಷದ ಕೇಂದ್ರ ಸಮಿತಿಯ ಸಭೆಗಳಿಗೆ ಬರುತ್ತಿದ್ದ ತೆಳ್ಳಗಿನ ಆಕೃತಿಯ ಬಾಲುವನ್ನು ಮತ್ತೊಮ್ಮೆ ನಾವು ಕಾಣಲಾರೆವೆಂಬುದನ್ನು ನಮ್ಮಿಂದ ನಂಬುವುದೇ ಕಷ್ಟವಾಗಿದೆ; ಈ ಮನುಷ್ಯನ ಮೆತ್ತನೆಯ ಮಾತುಗಳನ್ನು ಮತ್ತೊಮ್ಮೆ ನಾವು ಕೇಳಲಾರೆವು ಎಂಬುದನ್ನು ಕೂಡ ನಂಬಲಾಗುತ್ತಿಲ್ಲ. ಆದರೂ ಕೂಡ ದುರಂತ ಸತ್ಯ ನಮ್ಮನ್ನೆಲ್ಲಾ ಆಳವಾದ ಶೋಕದಲ್ಲಿ ಮುಳುಗಿಸಿಬಿಟ್ಟಿದೆ.

ನಮ್ಮ ಅವಿಭಜಿತ ಪಕ್ಷದ ಪಾಲ್ಘಾಟ್ ಸಮಾವೇಶದ ನಂತರ ಬಾಲಸುಬ್ರಮಣ್ಯಂ ಅವರೊಡನೆ ನನ್ನ ಸಂಬಂಧ ಹತ್ತಿರವಾಯಿತು. ಮಧುರೈನಲ್ಲಿ ನಡೆಯಲಿದ್ದ ಕೆಲವು ಸಾರ್ವಜನಿಕ ಸಭೆಗಳಲ್ಲಿ ಮಾತನಾಡುವುದಕ್ಕಾಗಿ ಪಾಲ್ಘಾಟ್‌ನಿಂದ ಹೊರಟಾಗ ನನ್ನನ್ನೂ ಜೊತೆಗೆ ಬರುವಂತೆ ಕೇಳಿದರು. ಅವಿಭಜಿತ ಪಕ್ಷದೊಳಗೆ ನಡೆಯುತ್ತಿದ್ದುದು ಏನು ಎಂಬುದರ ಕುರಿತಾದ ನಿರ್ದಿಷ್ಟ ರಾಜಕೀಯ ಅರ್ಥವಂತಿಕೆ ಅವರ ಆಹ್ವಾನದಲ್ಲಿ ಒಳಗೊಂಡಿತ್ತು.

ಸಂಘಟನೆಯ ಒಳಗೆ ಕಾಣಿಸಿಕೊಳ್ಳುತ್ತಿದ್ದ ಒಲವುಗಳನ್ನು, ಸ್ವಭಾವಗಳನ್ನು ಕೂಲಂಕುಶವಾಗಿ ಗಮನಿಸುತ್ತಿದ್ದರು. ಅವರ ಗಮನಕ್ಕೆ ಬಾರದೆ ತಪ್ಪಿಸಿಕೊಳ್ಳುತ್ತಿದ್ದ ವಿಷಯಗಳು ತೀರಾ ಅಪರೂಪವಾಗಿತ್ತು. ಜನಸಾಮಾನ್ಯರು ಅವರನ್ನು ಹೇಗೆ ಗೌರವಿಸುತ್ತಿದ್ದರೆಂಬುದನ್ನು ನಾನು ಮಧುರೈನಲ್ಲಿ ಕಂಡೆನು. ಈ ಒಂದು ಘಟ್ಟದಲ್ಲಿ, ಮತ್ತು ನಂತರದಲ್ಲಿ ಅವರೊಂದಿಗೆ ನಾನು ನಡೆಸಿದ ಚರ್ಚೆಗಳು ಅವರ ವ್ಯಕ್ತಿತ್ವದ ಅನೇಕ ಮುಖಗಳನ್ನು ನನಗೆ ಪರಿಚಯಿಸಿತು. ಇವರು ತಮ್ಮ ಎಲ್ಲಾ ವೈಯಕ್ತಿಕ ಆಸೆಗಳನ್ನು ಮೀರಿದವರಾದುದರಿಂದಾಗಿಯೇ ಇದ್ದುದನ್ನು ಇದ್ದಂತೆ ನೇರವಾಗಿ, ಯಾವುದೇ ಸಂಕೋಚವೂ ಇಲ್ಲದೆ ಹೇಳಬಲ್ಲವರಾಗಿದ್ದರು. ದಿನನಿತ್ಯದ ರಾಜಕೀಯದಲ್ಲಾಗುತ್ತಿದ್ದ ಬದಲಾವಣೆಗಳನ್ನು, ಮಹತ್ವದ ರಾಷ್ಟ್ರೀಯ ಘಟನೆಗಳನ್ನೂ ಕೂಡ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ದೃಷ್ಟಿಯಿಂದ ನಿರ್ಣಯಿಸಬಲ್ಲವರಾಗಿದ್ದರು. ಇತರರೊಂದಿಗೆ ಭಿನ್ನಾಭಿಪ್ರಾಯವುಂಟಾದಾಗ ಅವರು ಸುಲಭವಾಗಿ ಶರಣಾಗುತ್ತಿರಲಿಲ್ಲ, ಆದರೆ ಬಹುಸಂಖ್ಯಾತರ ಅಭಿಪ್ರಾಯಕ್ಕೆ ಬೆಲೆ ಕೊಟ್ಟು, ಈ ಬಗ್ಗೆ ತಮ್ಮ ಅಭಿಪ್ರಾಯವನ್ನು ಕಾಯ್ದಿಡಲಾಗಿದೆ ಎಂದು ಹೇಳುತ್ತಿದ್ದರು.

ಅದೇ ಸಂಧರ್ಭದಲ್ಲಿ ಅವರು ತೀರಾ ಕಠಿಣ ಮನಸ್ಸಿನವರಾಗಿರಲಿಲ್ಲ. ಅವರನ್ನು ಯಾವುದೂ ಅಲುಗಾಡಿಸಲಾಗದಂತಹ ಸಿದ್ಧಪಡಿಸಿದ ಅಭಿಪ್ರಾಯಗಳು ಅವರಲ್ಲಿರಲಿಲ್ಲ. ಪಕ್ಷದ ಮೂಲಭೂತ ತತ್ವಗಳ ಹಾಗೂ ಪಕ್ಷದ ರಾಜಕೀಯ ನಿಲುವಿನ ಆಧಾರದ ಮೇಲೆ ಅವರ ಅಭಿಪ್ರಾಯದಲ್ಲುಂಟಾದ ತಪ್ಪನ್ನು ಸಾಬೀತು ಮಾಡಿ ತೋರಿಸಿದಾಗ ಅದನ್ನು ಒಪ್ಪಿಕೊಳ್ಳುತ್ತಿದ್ದರು.

ನಮ್ಮ ಪಕ್ಷದ ಈ ಧೀರ ನಾಯಕನೊಂದಿಗಿನ ದೀರ್ಘ ಒಡನಾಟ ಕ್ರಮೇಣವಾಗಿ ಆತನ ವ್ಯಕ್ತಿತ್ವದ ಕುರಿತಾದ ನನ್ನ ಅನಿಸಿಕೆಗಳನ್ನು ರೂಪಿಸಲು ಸಾಧ್ಯವಾಯಿತು. ಮಾರ್ಕ್ಸ್‌ವಾದ-ಲೆನಿನ್‌ವಾದ ಮತ್ತು ಪಕ್ಷದ ಕಾರ್ಯಕ್ರಮದಲ್ಲಿ ಅಚಲ ನಿಷ್ಠೆ ಮಾತ್ರವೇ ಅಲ್ಲದೆ, ಅವರಲ್ಲಿದ್ದ ಇತರ ಗುಣಗಳೂ ಕೂಡ ಬಾಲು ಪಕ್ಷದ ಯಶಸ್ವೀ ಮುಖಂಡರಾಗುವುದಕ್ಕೆ ಕಾರಣವಾಗಿದ್ದವು. ನಾವು ಪರಿಷ್ಕರಣವಾದವನ್ನು ನಿರಾಕರಿಸಿದ್ದರ ಪರಿಣಾಮವಾಗಿ ಉಂಟಾದ ಗೊಂದಲದಲ್ಲಿ ನಮ್ಮ ಅನೇಕ ಸದಸ್ಯರಲ್ಲಿ ಅರಾಜಕ ಪ್ರವೃತ್ತಿ ತಲೆದೋರಿತು. ಪರಿಷ್ಕರಣವಾದಕ್ಕೆದುರಾದ ಜಾಗೃತಿ ಆಗಿನ್ನೂ ಸರಿಯಾದ ನೆಲೆಯನ್ನು ಕಂಡುಕೊಂಡಿರಲಿಲ್ಲ. ಪರಿಷ್ಕರಣವಾದಕ್ಕೆ ಎದುರಾಗಿ ನಡೆದ ಬಂಡಾಯ ಬಾಲಿಶವಾದ ಎಡಸಂಕುಚಿತವಾದಕ್ಕೆ ಹಾದಿ ಮಾಡಿಕೊಡುವ ಅಪಾಯವಿತ್ತು. ಪಕ್ಷದ ಒಳಗಡೆ ರೂಪುಗೊಳ್ಳುತ್ತಿದ್ದ, ಚೀನೀ ಕಮ್ಯೂನಿಸ್ಟ್ ಪಕ್ಷದಿಂದ ಪ್ರೋತ್ಸಾಹಿಸಲ್ಪಟ್ಟ ನಕ್ಸಲ್‌ವಾದೀ ಗುಂಪು ಈ ಅಪಾಯದ ಪ್ರಾತಿನಿಧಿಕ ರೂಪವಾಗಿತ್ತು. ಪಕ್ಷದ ತಮಿಳುನಾಡು ರಾಜ್ಯ ಸಮಿತಿಯು ಈ ಅಪಾಯದಿಂದಾಗಿ ತೀವ್ರ ಹಾನಿಗೊಳಗಾಗಿತ್ತು.

ಇಂಥ ಒಂದು ಸಂದರ್ಭದಲ್ಲಿ ನಮ್ಮ ಉದ್ದೇಶಗಳನ್ನು ವಿಶಾಲಗೊಳಿಸಿಬಿಡುವ ಮತ್ತು ಗೊಂದಲಕ್ಕೊಳಗಾದವರನ್ನು, ಅಥವ ಅಭಿಪ್ರಾಯ ಭೇದವುಳ್ಳವರನ್ನು ನಕ್ಸಲೈಟರೆಂದು ಮತ್ತು ಪಕ್ಷ ವಿರೋಧಿಗಳೆಂದು ತೀರ್ಮಾನಿಸಿಬಿಡಲಾಗುತ್ತಿತ್ತು.



ಕಾಂ| ಎ. ಬಾಲಸುಬ್ರಹ್ಮಣ್ಯಂ

ಇಂಥ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ತಾತ್ಕಾಲಿಕವಾಗಿ ತಪ್ಪು ಮಾಡುವವರನ್ನು ಮತ್ತು ಹಾದಿತಪ್ಪಿದವರನ್ನು ಮತ್ತು ಆಳವಾಗಿ ಬೇರುಬಿಟ್ಟ ರೋಗವನ್ನು ಪ್ರತ್ಯೇಕಿಸಿ ನೋಡಬಲ್ಲಂತಹ ನಾಯಕರೊಬ್ಬರ ಅವಶ್ಯಕತೆಯಿತ್ತು. ಮೊದಲನೆಯ ವರ್ಗಕ್ಕೆ ಸೇರಿದವರನ್ನು ಸರಿಪಡಿಸುವ ಮತ್ತು ಎರಡನೆಯ ವರ್ಗವನ್ನು ಎದುರಿಸುವ ಸಮರ್ಥ ನಾಯಕತ್ವಬೇಕಾಗಿತ್ತು. ಬಾಲು ತಮ್ಮ ವಿಶಿಷ್ಟವಾದ ಚಿಕಿತ್ಸಕ ಗುಣದ ಮೂಲಕ, ವ್ಯಕ್ತಿಗಳ ಕುರಿತು ಸರಿಯಾಗಿ ನಿರ್ಣಯಿಸುವಂತ ಗುಣಗಳಿಂದಾಗಿ, ಸೂಕ್ಷ್ಮಾವಲೋಕನದ ಮೂಲಕ ಈ ಎಲ್ಲ ಗಂಡಾಂತರಕಾರೀ ಶಕ್ತಿಗಳ ವಿರುದ್ಧ ಹೋರಾಟ ನಡೆಸಿ ಪಕ್ಷದ ಐಕ್ಯತೆಯನ್ನು ಕಾಪಾಡುವಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸಿದರು.

ನಕ್ಸಲ್‌ವಾದೀ ಶಕ್ತಿಗಳ ವಿರುದ್ಧ ಅವರದು ತೀರಾ ನಿರ್ದಾಕ್ಷಿಣ್ಯವಾದ ಮನೋಭಾವ. ಯಾವುದಾದರೊಂದು ಸ್ಪಷ್ಟ ನೆಲೆಗೆ ಬರದೆ ಅತ್ತಿತ್ತ ಹೊಯ್ದಾಡುವ ಚಂಚಲ ಮನಸ್ಸಿನ ವ್ಯಕ್ತಿಗಳನ್ನು ಅವರು ನಂಬುತ್ತಿರಲಿಲ್ಲ. ಆದರೆ ಅದೇ ಸಂದರ್ಭದಲ್ಲಿ ಬೇರೆಯವರು ತಮ್ಮ ಅಭಿಪ್ರಾಯಗಳನ್ನು ಬದಲಿಸಿಕೊಳ್ಳಲು ಸಾಕಷ್ಟು ಅವಕಾಶಗಳನ್ನು ಕಲ್ಪಿಸಿಕೊಡುತ್ತಿದ್ದರು.

ಬಾಲು ಅವರ ಮೃದು ಕೋಪ, ಅವರ ವಿನಯ ಮತ್ತು ಅವರ ದೃಢ ನಿರ್ಧಾರ ಪಕ್ಷವನ್ನು ಬಿಕ್ಕಟ್ಟಿನ ಸಂದರ್ಭದಲ್ಲಿ ಪರಿಣಾಮಕಾರಿಯಾಗಿ ರಕ್ಷಿಸಿತು.

ಕೇಂದ್ರ ಸಮಿತಿ ಹಾಗೂ ಪೊಲಿಟ್ ಬ್ಯೂರೋ ಸದಸ್ಯರಾಗಿ ಬಾಲಸುಬ್ರಮಣ್ಯಂ ಅವರು ಚರ್ಚೆಗಳಲ್ಲಿ ನೀಡಿದ ಕೊಡುಗೆ ತುಂಬಾ ಅಮೂಲ್ಯವಾದುದು. ಅವರು ಹೆಚ್ಚು ಮಾತನಾಡುತ್ತಿರಲಿಲ್ಲ. ಆದರೆ ಮಾತನಾಡುವ ಕೆಲವೇ ಶಬ್ದಗಳಲ್ಲಿ ಸ್ಪಷ್ಟವೂ, ನಿರ್ಣಯಾತ್ಮಕವೂ ಆಗಿರುತ್ತಿದ್ದವು.

ಕಾರ್ಮಿಕ ವರ್ಗದ ನಾಯಕರೂ, ಪತ್ರಕರ್ತರೂ, ಬರಹಗಾರರೂ, ವಿಧಾನ ಸಭಾ ಸದಸ್ಯರೂ, ಸಿದ್ಧಾಂತಿಯೂ ಮತ್ತು ಪಕ್ಷದ ನಾಯಕರೂ ಆಗಿದ್ದ ಬಾಲಸುಬ್ರಮಣ್ಯಂ ಅವರದು ಬಹುಮುಖ ವ್ಯಕ್ತಿತ್ವ.

ಇಂತಹ ಒಬ್ಬ ಅಸಾಮಾನ್ಯ, ಅಪರೂಪದ ಸಂಗಾತಿಯನ್ನು ಬಿಕ್ಕಟ್ಟಿನ ಈ ಗಳಿಗೆಯಲ್ಲಿ ಕಳೆದುಕೊಂಡದ್ದು ಪಕ್ಷಕ್ಕೂ, ಪಕ್ಷದ ನಾಯಕತ್ವಕ್ಕೂ ಸರಿಪಡಿಸಲಾಗದ ನಷ್ಟವಾಗಿ ಉಳಿದುಬಿಟ್ಟಿದೆ. ಉಲ್ಬಣಗೊಳ್ಳುತ್ತಿದ್ದ ಅವರ ಕಾಯಿಲೆಯ ಕುರಿತು ನಾವು ಚಿಂತಿತರಾಗಿ, ಅವರನ್ನು ಮದ್ರಾಸಿನಿಂದ ದೆಹಲಿಗೆ ವರ್ಗಾಯಿಸಬೇಕೆಂದು ಸೂಚಿಸಿದೆವು. ಇದರಿಂದಲಾದರೂ ಅವರ ಮಾನಸಿಕ ಒತ್ತಡ ಕಡಿಮೆಯಾಗಬಹುದೆಂಬುದು ನಮ್ಮ ಎಣಿಕೆಯಾಗಿತ್ತು. ಕಾರಣ ಅವರು ಆಗ ಪಕ್ಷದ ತಮಿಳುನಾಡು ಘಟಕದ ಕಾರ್ಯದರ್ಶಿಯಾಗಿ ತುಂಬಾ ಜವಾಬ್ದಾರಿಗಳನ್ನು ಹೊಂದಿದ್ದರು. ಆದರೆ ನಮ್ಮ ಎಣಿಕೆ ಸಫಲವಾಗಲಿಲ್ಲ. ಮತ್ತು ಯಾರೂ ತುಂಬಲಾಗದ ನಷ್ಟಕ್ಕೆ ನಮ್ಮನ್ನೀಡು ಮಾಡಿ ಬಾಲು ಕಣ್ಮರೆಯಾಗಿ ಹೋದರು. ಬಾಲು ಅಂಥವರನ್ನು ನಾವು ಮತ್ತೆ ಪಡೆಯಲು ತುಂಬಾ ದೀರ್ಘಕಾಲ ಬೇಕಾಗುತ್ತದೆ.

●

ಪಿ.ಡಬ್ಲ್ಯೂ.ಡಿ. ಕಾರ್ಮಿಕರಿಂದ ಕನಿಷ್ಠ ಕೂಲಿ ಜಾರಿಗಾಗಿ ಒತ್ತಾಯ

20-8-82 ರಂದು ಎನ್.ಎಂ.ಆರ್. ಕಾರ್ಮಿಕ ಸಂಘದ ಕಾರ್ಯಕಾರಿ ಸಮಿತಿಯು, ಸಂಘದ ಉಪಾಧ್ಯಕ್ಷ ಕಾಂ| ಮಲ್ಲಯ್ಯನವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ಸಭೆ ಸೇರಿ ಕನಿಷ್ಠ ಕೂಲಿ ಜಾರಿಗಾಗಿ ಒತ್ತಾಯಿಸಿದೆ.

ಯಾವುದೇ ಕನಿಷ್ಟ ಸೌಲಭ್ಯಗಳನ್ನು ನೀಡದೆ "ಕತ್ತೆ ದುಡಿತ" ದುಡಿಸಿಕೊಳ್ಳುತ್ತಿರುವುದು ಲೋಕೋಪಯೋಗಿ ಇಲಾಖೆಯ ಜಾಯಮಾನ. ಈ ಇಲಾಖೆಯಲ್ಲಿ ರಾಜ್ಯಾದ್ಯಂತ ಸುಮಾರು 20,000 ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ದುಡಿದು, ದುಡಿದು ವಯಸ್ಸಾದ ಮೇಲೆ ಯಾವುದೇ ಪರಿಹಾರ ನೀಡದೇ ಕಾರ್ಮಿಕರನ್ನು ಹೊರದೂಡುವ ಪ್ರವೃತ್ತಿ ಇದೆ.

ಈ ಎಲ್ಲ ಅನ್ಯಾಯ-ದೌರ್ಜನ್ಯ ಪ್ರತಿಭಟಿಸಿ ಸೆಪ್ಟೆಂಬರ್ 15 ರಿಂದ ಕಾರ್ಮಿಕ ಇಲಾಖೆಯ ಕಚೇರಿ ಎದುರು ಧರಣಿ ಸತ್ಯಾಗ್ರಹ ಹೂಡಲು ಸಭೆ ನಿರ್ಧರಿಸಿದೆ. ಸಂಘದ ಪ್ರಧಾನ ಕಾರ್ಯದರ್ಶಿ ಕಾಂ| ಆರ್. ಶ್ರೀನಿವಾಸ್ ಮಾತನಾಡಿ ರಾಜ್ಯಾದ್ಯಂತ ಹರಡಿರುವ ಕಾರ್ಮಿಕರನ್ನು ಸಂಘಟಿಸಲು ಕರೆ ನೀಡಿದರು. ಈ ಸಭೆಗೆ ಕೃಷ್ಣ ಮೇಲ್ದಂಡೆ ಯೋಜನೆಯಡಿಯಲ್ಲಿ ಕೆಲಸ ಮಾಡುತ್ತಿರುವ ಕಾಂ| ನಾರಾಯಣ ಅವರು ಆಗಮಿಸಿದ್ದು, ತಮ್ಮ ಸಹಕಾರ-ಬೆಂಬಲ ನೀಡುವುದಾಗಿ ತಿಳಿಸಿದರು.

●

ರಾಜ್ಯದಲ್ಲಿ ದಲಿತರ ಕ್ಷೇಮಾಭಿವೃದ್ಧಿ ಕಾಗದದ ಮೇಲೆ ಮಾತ್ರ

—ರಾಜಮಲ್ಲು

"ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕ್ಷೇಮಾಭಿವೃದ್ಧಿಗಾಗಿ ರೂಪಿಸಿರುವ ಯೋಜನೆಗನ್ನು ಜಾರಿಗೊಳಿಸುವಲ್ಲಿ ರಾಜ್ಯ ಸರ್ಕಾರ ಉದ್ದೇಶಪೂರ್ವಕವಾಗಿಯೆ ನಿರಾಸಕ್ತಿ ವಹಿಸಿದೆ."

"ಸಾಮಾಜಿಕ – ಆರ್ಥಿಕ ಕಾರ್ಯಕ್ರಮಗಳನ್ನು ಜಾರಿಗೊಳಿಸುವಲ್ಲಿ ಅಧಿಕಾರಿಗಳಲ್ಲಿ ಪ್ರಾಮಾಣಿಕತೆ ಮತ್ತು ಬದ್ಧತೆಯ ಕೊರತೆ ಇದೆ"– ಹೀಗೆ ಸ್ಪಷ್ಟ ಅಭಿಪ್ರಾಯ ವ್ಯಕ್ತಪಡಿಸಿದವರು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಆಯೋಗದ ಅಧ್ಯಕ್ಷ ಶ್ರೀ ರಾಜಮಲ್ಲು.

ಡೆಕ್ಕನ್ ಹೆರಾಲ್ಡ್ ನಡೆಸಿದ ಸಂದರ್ಶನವೊಂದರಲ್ಲಿ ಶ್ರೀ ರಾಜಮಲ್ಲು, ಬಹುತೇಕ ಕಾರ್ಯಕ್ರಮ ಮತ್ತು ಯೋಜನೆಗಳು ಕೇವಲ ಕಾಗದದ ಮೇಲಷ್ಟೆ ಉಳಿದಿವೆಯೆಂದಿದ್ದಾರೆ.

ಅನೇಕ ಇಲಾಖೆಗಳು ಪರಿಶಿಷ್ಟ ಜಾತಿಯ ಜನರು 'ಬಡತನದ ರೇಖೆ ದಾಟುವಂತೆ' ಯೋಜನೆಗಳನ್ನು ರೂಪಿಸಿಕೊಂಡಾಗ್ಯು, ಯಾವ ಇಲಾಖೆಯೂ ಅವು ಸಾಧಿಸಿರುವ ಪ್ರಗತಿಯ ಬಗ್ಗೆಯಾಗಲಿ ಅಥವಾ ಆ ಯೋಜನೆಗಳ ಬಗ್ಗೆಯಾಗಲಿ ಸ್ಪಷ್ಟ ಪ್ರತಿಕ್ರಿಯೆ ಕೊಟ್ಟಿಲ್ಲ.

ಶ್ರೀ ರಾಜಮಲ್ಲು ಅವರು ಇಲಾಖೆಯ ಮುಖ್ಯಸ್ಥರನ್ನು ಭೇಟಿಮಾಡಿ ಈ ವಿಷಯದ ಬಗ್ಗೆ ಕೇಳಿದಾಗ "ನಾವು ಪ್ರಗತಿ ಸಾಧಿಸುತ್ತಿದ್ದೇವೆ" ಎಂದು ಹೇಳಿದ್ದಾರೆ. ಯಾವ ಪ್ರಗತಿ ? ಮತ್ತು ಎಷ್ಟು ಜನ ಬಡತನದ ರೇಖೆ ದಾಟಿದ್ದಾರೆ ? ಎಂದು ಶ್ರೀ ರಾಜಮಲ್ಲು ಅಧಿಕಾರಿಗಳನ್ನು ಪ್ರಶ್ನಿಸಿದಾಗ ಅವರಿಂದ ಉತ್ತರ ಬರಲಿಲ್ಲ.

ಶ್ರೀ ರಾಜಮಲ್ಲು ಅವರ ಪ್ರಕಾರ 'ಉದ್ದೇಶ ಪೂರ್ವಕವಾಗಿಯೆ ನಿಧಿಯನ್ನು ಕಡೆಯ ನಿಮಿಷದವರೆಗೂ ಬಿಡುಗಡೆ' ಮಾಡುತ್ತಿಲ್ಲ. ಸರ್ಕಾರ ರೂಪಿಸಿರುವ ಬಹುತೇಕ ಎಲ್ಲ 29 ಯೋಜನೆಗಳಿಗೂ ವರ್ಷದ ಕಟ್ಟಕಡೆಯಲ್ಲಿ ನಿಧಿ ದೊರೆಯುತ್ತದೆ. ಪರಿಣಾಮವಾಗಿ ಈ ಅಧಿಕ ಪ್ರಮಾಣದ ಹಣವನ್ನು ಪರಿಶಿಷ್ಟ ಜಾತಿಯ ಜನಗಳ ಹಿತಕ್ಕಾಗಿ ಬಳಸಲು ಸಾಧ್ಯವಾಗುವುದಿಲ್ಲ.

ಪರಿಶಿಷ್ಟ ಜಾತಿಯ ಒಂದು ಕುಟುಂಬಕ್ಕೆ ಒಂದು ಹಸುವನ್ನು ಕೊಡುವ ಸರ್ಕಾರದ ಯೊಜನೆ ನಯವಂಚನೆಯಲ್ಲದೆ ಬೇರೇನೂ ಅಲ್ಲ. ಒಂದು ಹರಿಜನ ಕುಟುಂಬ ಕೇವಲ ಒಂದು ಹಸುವಿನಿಂದ ಏನು ಪಡೆಯಲು ಸಾಧ್ಯ ? ಎಂದು ರಾಜಮಲ್ಲು ಪ್ರಶ್ನಿಸುತ್ತಾರೆ. ಕೊನೆಯ ಪಕ್ಷ ಎರಡು–ಮೂರು ಹಸುಗಳನ್ನಾದರು ಕೊಟ್ಟರೆ ಬಡತನದ ರೇಖೆಯನ್ನಾದರು ದಾಟಲು ನೆರವಾಗಬಹುದು ಎಂದು ಅಭಿಪ್ರಾಯ ಪಡುತ್ತಾರೆ, (ಅರ್ಥ : ಹಸುಗಳನ್ನು ಪಡೆದ ಕುಟುಂಬದ ಆದಾಯ ತಿಂಗಳಿಗೆ 300 ರೂ.ಗಳಾದರು ಆಗಬಹುದು). ಇದು ಕೇವಲ ಅಂಕಿ-ಸಂಖ್ಯೆಗಳ ಉದ್ದೇಶಕ್ಕಾಗಿ ಹೊರತು ಈ ಜನರ ಬಡತನವನ್ನು ಹೋಗಲಾಡಿಸಲು ಅಲ್ಲವೆಂಬ ಸಂಶಯವನ್ನು ವ್ಯಕ್ತಪಡಿಸಿದ್ದಾರೆ.

ಮನೆಯಿಲ್ಲದ ಹರಿಜನರಿಗೆ ಸಹಾಯವಾಗಿಲ್ಲದ ಇನ್ನೊಂದು ಕ್ಷೇತ್ರವೆಂದರೆ 'ಜನತಾ ಗೃಹ ನಿರ್ಮಾಣ ಯೋಜನೆ'. ಈ ಯೋಜನೆಯ ಪ್ರಕಾರ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುವ ಹೆಚ್ಚು ಸಂಖ್ಯೆಯ ಪರಿಶಿಷ್ಟ ಜಾತಿಯ ಜನ ಸಮುದಾಯಕ್ಕೆ ಒಂದು ರೂಮಿನ ವಸತಿ ಕೊಡಬೇಕಾಗುತ್ತದೆ. ಒಂದು ರೂಮಿನ ವಸತಿ ಆರ್ಥಿಕವಾಗಿ ಅಷ್ಟೇನು ನೆರವಾಗಲಾರದು. ಮತ್ತು ಇದು ಉಪಯೋಗವೇ ಇಲ್ಲದ ಯೋಜನೆ.

ಪ್ರತಿ ಜನತಾ ಗೃಹ ನಿರ್ಮಾಣಕ್ಕೆಂದು ಮೂರು ಮೂರು ಮೂಟೆ ಸಿಮೆಂಟ್ ಹಂಚಿದಾಗ್ಯು ಯಾವ ಕಟ್ಟಡ ನಿರ್ಮಾಣದಲ್ಲೂ ಅಷ್ಟು ಪ್ರಮಾಣದ ಸಿಮೆಂಟ್ ಬಳಸಿರುವುದು ಕಾಣುವುದೇ ಇಲ್ಲ. ಕಟ್ಟಡಕ್ಕೆ ಮಣ್ಣನ್ನು ಮಾತ್ರ ಬಳಸಿಕೊಂಡಿರುವುದರಿಂದ ಮಳೆಗಾಲದಲ್ಲಿ ಸಂಪೂರ್ಣವಾಗಿ ಬಿದ್ದು ಹೋಗುತ್ತಿವೆ.

'ಮನೆಯ ಸುತ್ತ ಅವನ ತೋಟ' ಬೆಳೆಸಲು ಪ್ರತಿಯೊಬ್ಬರಿಗೂ ಮೂರು ತೆಂಗಿನ ಬೀಜಗಳನ್ನು ಕೊಡಲು ಯೋಜನೆಯೊಂದನ್ನು ಸಿದ್ಧಪಡಿಸಿಕೊಂಡಿರುವ ತೋಟಗಾರಿಕೆ ಇಲಾಖೆಯು ಹೆಮ್ಮೆಪಟ್ಟುಕೊಳ್ಳುತ್ತಿದೆ. ಪಡೆದುಕೊಂಡ ಈ ಬೀಜಗಳನ್ನು ಬಿತ್ತುವುದು ಎಲ್ಲಿ ಎಂಬ ಪ್ರಶ್ನೆಗೆ ಇಲಾಖೆಯ ಹತ್ತಿರ ಉತ್ತರವಿಲ್ಲ.

ಒಬ್ಬ ಪರಿಶಿಷ್ಟ ಜಾತಿಯ ಮನುಷ್ಯನಿಗೆ ಇರಲು ಮನೆಯೇ ಇಲ್ಲದಿದ್ದಾಗ ಇನ್ನು ತೋಟವನ್ನು ಎಲ್ಲಿ ಬೆಳೆಸುತ್ತಾನೆ ? ಎಂದು ಪ್ರಶ್ನಿಸಿದ ಅವರು ಇಂತಹ 'ಅಪ್ರಾಮಾಣಿಕ ಮತ್ತು ಅರ್ಧ ಮನಸ್ಸಿನ ಯೋಜನೆಗಳ' ಬದಲಾಗಿ ರಾಜ್ಯ ಸರ್ಕಾರ ಸ್ವಲ್ಪ ಭೂಮಿಕೊಟ್ಟು ಅದರ ವ್ಯವಸಾಯಕ್ಕೆ ಎಲ್ಲ ಸಲವತ್ತುಗಳನ್ನು ಒದಗಿಸಲಿ ಎಂದು ಸರ್ಕಾರಕ್ಕೆ ಸಲಹೆ ಮಾಡಿದರು.

ಶ್ರೀ ರಾಜಮಲ್ಲು ಅವರು ಹರಿಜನ ಕುಟುಂಬಗಳಿಗೆ ಸಾಕು ಕೋಳಿಗಳನ್ನು ಕೊಡುವ ಯೋಜನೆಯ ಬಗ್ಗೆ ಹೇಳುತ್ತಾ ಒಂದು ಬಾರಿ ಕೋಳಿಗಳನ್ನು ಕೊಟ್ಟರೆ ಅವುಗಳನ್ನು ಬದಲಿಸುವುದೇ ಇಲ್ಲವೆಂದರು ಒಂದು ಕುಟುಂಬಕ್ಕೆ ಕೊನೆಯ ಪಕ್ಷ ನೂರು ಕೋಳಿಗಳನ್ನು ಕೊಟ್ಟು ಅವನ್ನು ಆರು ತಿಂಗಳಿಗೊಮ್ಮೆ ಬದಲಿಸುವ ಯೋಜನೆಗೆ ಆಶಯ ವ್ಯಕ್ತಪಡಿಸಿದರು.

ಪ್ರಧಾನ ಮಂತ್ರಿಯವರು, ಯೋಜನೆಗಳನ್ನು ತ್ವರಿತವಾಗಿ ಜಾರಿಗೊಳಿಸುವ ಬಗ್ಗೆ ಎರಡು ಬಾರಿ ಮುಖ್ಯ ಮಂತ್ರಿಯವರಿಗೆ ಪತ್ರ ಬರೆದರೂ ಕೂಡ ರಾಜ್ಯವು ಪರಿಶಿಷ್ಟ ಜಾತಿ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸುವಲ್ಲಿ ಬಹಳ 'ನಿಧಾನ' ಕ್ರಮವನ್ನು ಅನುಸರಿಸುತ್ತಿದೆ.

ಸರ್ಕಾರ ಮೀಸಲಾತಿಯನ್ನು ತೃಪ್ತಿಕರವಾಗಿ ಅನುಸರಿಸದಿರುವುದಕ್ಕಾಗಿ ಅವರು ತುಂಬ ನಿರಾಶೆಯನ್ನು ವ್ಯಕ್ತಪಡಿಸಿದರು. ಕೆಲವು ಇಲಾಖೆಗಳಲ್ಲಿ ಕಸಗುಡಿಸುವ ಕೆಲಸಕ್ಕೆ ಮಾತ್ರ ಮೀಸಲಾತಿ ರೀತ್ಯ ಪೂರ್ಣಭರ್ತಿಮಾಡಿದ್ದು ಮೇಲ್ಮಟ್ಟದ ಕೆಲಸಗಳಿಗೆ ಸಂವಿಧಾನ ಖಾತರಿಯ ಅವರ ಹಕ್ಕುಗಳನ್ನು ಕಡೆಗಣಿಸಲಾಗಿದೆ. ಯೋಗ್ಯ ಅಭ್ಯರ್ಥಿಗಳು ಸಿಗುತ್ತಿಲ್ಲವೆಂಬ ನೆಪ ಒಡ್ಡುತ್ತಿದ್ದಾರೆ. ಇದರ ಬಗ್ಗೆ ವಿವರ ಸಂಶೋಧನೆ ಅಗತ್ಯ ಎಂದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಭಾರೀ ಉದ್ಯಮಗಳಲ್ಲೂ ಸಹ ಮೀಸಲಾತಿ ಕ್ರಮವನ್ನು ತೃಪ್ತಿಕರವಾಗಿ ಭರ್ತಿ ಮಾಡದಿರುವುದನ್ನು ಆಯೋಗ ಗಮನಿಸಿದೆ. ಎಂದು ಶ್ರೀ ರಾಜಮಲ್ಲು ಹೇಳಿದ್ದಾರೆ

ಬೆಂಗಳೂರು ನಗರದಲ್ಲಿ ಹಾಸ್ಟಲ್ ಸೌಲಭ್ಯವಿಲ್ಲದೆ ದುಃಸ್ಥಿತಿಯಲ್ಲಿರುವ ವಿದ್ಯಾರ್ಥಿಗಳನ್ನು ರಾಜಮಲ್ಲು ಅವರ ಗಮನಕ್ಕೆ ತಂದಾಗ ಆತಂಕಗೊಂಡು, ಪರಿಶಿಷ್ಟ ಜನಾಂಗದ ಎಲ್ಲಾ ವಿದ್ಯಾರ್ಥಿಗಳಿಗೆ ಹಾಸ್ಟಲ್ ಸೌಲಭ್ಯ ಒದಗಿಸುವುದು ಸರ್ಕಾರದ ಆದ್ಯ ಕರ್ತವ್ಯವೆಂದು ಹೇಳಿದರು.

ಬೆಂಗಳೂರಿನ ಮಹಾತ್ಮ ಗಾಂಧಿ ರಸ್ತೆ ಮತ್ತು ಪ್ರಿಂರೋಸ್ ರಸ್ತೆಯಲ್ಲಿರುವ ಎರಡು ವಿದ್ಯಾರ್ಥಿನಿಲಯಗಳಲ್ಲಿ 300 ವಿದ್ಯಾರ್ಥಿಗಿಳಿಗೆ ಹಾಸ್ಟಲ್ ಸೌಲಭ್ಯ ಕೊಟ್ಟಿದ್ದು ಈ ವರ್ಷ 100 ಕ್ಕೂ ಮಿಕ್ಕ ವಿದ್ಯಾರ್ಥಿಗಳಿಗೆ ಹಾಸ್ಟಲ್ ಸೌಲಭ್ಯವನ್ನು ನಿರಾಕರಿಸಲಾಗಿದೆ. ಸಂಬಧಪಟ್ಟ ಇಲಾಖೆಯು ಅವರನ್ನು ನಿಭಾಯಿಸಲು ಆಗುವುದಿಲ್ಲವೆಂಬ ನೆಪವೊಡ್ಡಿದೆ.

ಪ್ರತಿ ವರ್ಷವೂ ಪ್ರವೇಶಗಳು ಹೆಚ್ಚುತ್ತವೆ. ನಿಭಾಯಿಸಲು ಸಾಧ್ಯವಿಲ್ಲವೆನ್ನುವ ಸಮಾಜ ಕಲ್ಯಾಣ ಇಲಾಖೆಯ ವಾದ ಮೂರ್ಖತನದ್ದು. ವಾದಕ್ಕೆ ಕರ್ತವ್ಯ ಪಾಲನೆಯಲ್ಲಿ ಇಲಾಖೆಯ ಅಸಮರ್ಥತೆಯೇ ಕಾರಣ. ಸರ್ಕಾರ ನಗರದ ಹೊರಗಡೆಯಿಂದ ಬಂದ ಎಲ್ಲಾ ವಿದ್ಯಾರ್ಥಿಗಳಿಗೂ ಹಾಸ್ಟಲ್ ಸೌಲಭ್ಯ ಒದಗಿಸಬೇಕೆಂದರು.

ಜಾತಿ ಪತ್ರ ಪಡೆಯುವಲ್ಲಿನ ಸತ್ವ ಪರೀಕ್ಷೆ ಆಕ್ಷಮ್ಯ. ವಿದ್ಯಾರ್ಥಿಗಳಿಗೆ ಅತೀವ ಕಷ್ಟವಾಗುತ್ತಿರುವ ಈ ಮೂರ್ಖ ಪದ್ಧತಿ ಕರ್ನಾಟಕದಲ್ಲಿ ಮಾತ್ರ ಇದೆ. ಅವರ ವಿದ್ಯಾಭ್ಯಾಸಕ್ಕೆ ತಡೆಯೊಡ್ಡಲೆಂದೇ ಈ ಹರಿಜನ ವಿರೋಧಿ ಕುತಂತ್ರ ಕ್ರಮವನ್ನು ಅನುಸರಿಸುತ್ತಿರಬಹುದೆಂಬ ಸಂಶಯವನ್ನು ಶ್ರೀ ರಾಜಮಲ್ಲು ವ್ಯಕ್ತಪಡಿಸಿದ್ದಾರೆ. ಜಾತಿ ಪತ್ರ ನೀಡುವಲ್ಲಿ ಇಂದು ಅನುಸರಿಸುತ್ತಿಶುವ ಕ್ರಮ ತತ್‌ಕ್ಷಣ ಬದಲಾಗಬೇಕು.

40 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಹರಿಜನರು ವಾಸಿಸುವ ಗ್ರಾಮಗಳಿಗೆ ಹೊಂದಿಸುವ ರಸ್ತೆ ನಿರ್ಮಾಣವನ್ನು ರೂಪಿಸಿರುವ ಸರ್ಕಾರದ ಕ್ರಮವನ್ನು ಶ್ರೀ ರಾಜಮಲ್ಲು ಗೇಲಿ ಮಾಡಿದರು. ಕುಡಿಯುವ ನೀರು ಮತ್ತು ವಿದ್ಯುತ್ ವ್ಯವಸ್ಥೆಯೇ ಇಲ್ಲದ ಹಳ್ಳಿಗಳನ್ನು ಮುಖ್ಯ ರಸ್ತೆಗಳಿಗೆ ಹೊಂದಿಸುವಂತಹ ರಸ್ತೆ ನಿರ್ಮಾಣದ ತುರ್ತ ಅಗತ್ಯವಿತ್ತೆ ಎಂದು ಅವರು ಪ್ರಶ್ನಿಸುತ್ತಾರೆ. ಇಂತಹ ಯೋಜನೆಗಳು ಕಟ್ಟಡ ನಿರ್ಮಾಣಗಾರರಿಗೆ ಮಾತ್ರ ಸಹಾಯವಾಗುತ್ತವೆ ಎಂದು ಅವರು ಅಭಿಪ್ರಾಯಪಟ್ಟರು.

ಸಿ. ಆರ್. ಇ. ಸೆಲ್ ಪೋಲೀಸ್ ರಕ್ಷಣೆ ಮತ್ತು ಅಂತಹ ಕ್ರಮಗಳ ಬಗ್ಗೆ ಸಂಶಯ ವ್ಯಕ್ತಪಡಿಸಿದ ಅವರು 'ಸಾಮಾಜಿಕ–ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿ – ಅವರನ್ನು ಅವರೇ ಚೆನ್ನಾಗಿ ನೋಡಿಕೊಳ್ಳುತ್ತಾರೆ' ಎಂದು ತಿಳಿಸಿದರು. ಅವರಿಗೆ ಭಿಕ್ಷೆ ಕೊಡುವುದರ ಮೂಲಕ ಅವರನ್ನು ಕರುಣೆಗೆ ಒಳಪಡಿಸಿಕೊಂಡು ಹಿಂದುಳಿದವರು ಶಾಶ್ವತವಾಗಿ ಬಡತನದಲ್ಲಿ ಬಳಲುವಂತೆ ಮಾಡಲಾಗುತ್ತಿದೆ ಎಂದು ಶ್ರೀ ರಾಜಮಲ್ಲು ಆಪಾದಿಸಿದರು.

ಯೋಜನೆಗಳನ್ನು ಜಾರಿಗೊಳಿಸುವಲ್ಲಿ ಸರ್ಕಾರಿ ಅಧಿಕಾರಿಗಳು ಮೂಲಭೂತವಾಗಿ ಅಪ್ರಾಮಾಣಿಕರಾಗಿದ್ದಾರೆ. ಆದ್ದರಿಂದಲೆ, ಪ್ರತೀ ವರ್ಷ ಈ ಜನಾಂಗದ ಕ್ಷೇಮಾಭಿವೃದ್ಧಿಗಾಗಿ ನೀಡಲಾಗುತ್ತಿದೆ ಎನ್ನುವ ಹೆಚ್ಚು ಪ್ರಮಾಣದ ಹಣ ಉಪಯೋಗಿಸದೆ ಹೋಗುತ್ತಿದೆ. ಯೋಜನೆಗಳನ್ನು ಜಾರಿಗೊಳಿಸುವಲ್ಲಿ ಅಧಿಕಾರಿಗಳು ಬದ್ಧತೆ ಮತ್ತು ಪ್ರಾಮಾಣಿಕತೆಯನ್ನು ತೋರದಿದ್ದಲ್ಲಿ 144 ಕೋಟಿ ರೂ ಗಳ ವೆಚ್ಚದ ವಿಶೇಷ ಯೋಜನೆ ಪ್ರಯೋಜನವಿಲ್ಲದ್ದಾಗುತ್ತದೆ.

ಯೋಜನೆಗಳನ್ನು ಜಾರಿಗೊಳಿಸುವಲ್ಲಾಗುತ್ತಿರುವ ತಪ್ಪುಗಳನ್ನು ಆಯೋಗವು ಗೃಹ ಮಂತ್ರಿಯವರಿಗೆ ವರದಿ ಸಲ್ಲಿಸಲಾಗುವುದೆಂದು ಅವರು ತಿಳಿಸಿದರು ಅದನ್ನು ನಾವು ಮಾಡದ ಹೊರತು ಮುಂದೆ ಸರಿಯಾಗುವುದಿಲ್ಲವೆಂದು ತಿಳಿಸಿದರು.

(ಡೆಕ್ಕನ್ ಹೆರಾಲ್ಡ್ ಸೌಜನ್ಯ)



ಇತ್ತೀಚೆಗೆ ಬಿಜಾಪುರದಲ್ಲಿ ನಡೆದ ಎರಡನೇ ರೈತ ಸಮ್ಮೇಳನದ ಸಂದರ್ಭದ ಮೆರವಣಿಗೆ ದೃಶ್ಯ.

ಮೂರೂವರೆ ದಶಕಗಳು — ಒಂದು ಅವಲೋಕನ

ಈ ಸಲದ ಆಗಸ್ಟ್ 15ಕ್ಕೆ ಭಾರತ ಒಂದು ಸ್ವತಂತ್ರ ರಾಷ್ಟ್ರವಾಗಿ ಅಸ್ತಿತ್ವಕ್ಕೆ ಬಂದು ಮೂರೂವರೆ ದಶಕಗಳಾದವು. ಈ ಮೂವತ್ತೈದು ವರ್ಷಗಳ ಅವಧಿಯಲ್ಲಿ ಆಡಳಿತದ ಸೂತ್ರ ಹಿಡಿದವರು ದೊಡ್ಡ ಬಂಡವಾಳಗಾರರ ಹಾಗೂ ಭೂಮಾಲಿಕ ವರ್ಗದ ನಂಬಿಕಸ್ತ ಪ್ರತಿನಿಧಿಗಳು.

ಈ ಸಂಪೂರ್ಣ 35 ವರ್ಷಗಳ ಅವಧಿಯಲ್ಲಿ ಕಾಂಗ್ರೆಸ್ ಪಕ್ಷವೊಂದೇ ದೇಶದ ಈಗಿನ ಸ್ಥಿತಿಗೆ ಕಾರಣ ಎಂದು ಹೇಳುವುದು ತಪ್ಪಾಗುತ್ತದೆ. ಈ ಪಕ್ಷ 1977 ರಿಂದ 80ರವರೆಗೆ ಅಧಿಕಾರ ಅಧಿಕಾರ ಕಳೆದುಕೊಂಡಿತ್ತು. ಇದು ಪರಿಸ್ಥಿತಿಯ ಮೇಲೆ ಯಾವುದೇ ಬದಲಾವಣೆಯನ್ನು ಉಂಟುಮಾಡಲಿಲ್ಲ. ಕಾಂಗ್ರೆಸ್ ಪಕ್ಷವನ್ನು ಸ್ಥಾನ ಪಲ್ಲಟಗೊಳಿಸಿದ ಜನತಾ ಪಕ್ಷವಾಗಲಿ ಅಥವಾ ಲೋಕದಳ—ಕಾಂಗ್ರೆಸ್ (ಎಸ್) ನಾಯಕರಾಗಲೀ ಕಾಂಗ್ರೆಸ್ ಸರ್ಕಾರ ಹಾಕಿಕೊಟ್ಟಿದ್ದ ಹಳೆಯ ಸಾಮಾಜಿಕ-ಆರ್ಥಿಕ ಧೋರಣೆಗಳನ್ನೇ ಅನುಸರಿಸಿದರೇ ಹೊರತು ಭಿನ್ನವಾದ ಧೋರಣೆಯನ್ನೇನೂ ಅನುಸರಿಸಲಿಲ್ಲ. ಆದ್ದರಿಂದ ಆಳುವ ಪಕ್ಷಗಳಲ್ಲಿ ಬದಲಾವಣೆಯುಂಟಾದರೂ ಕೂಡ ಅದೇ ಧೋರಣೆಗಳೇ ಮುಂದುವರಿದವು.

ಬೇರೆಲ್ಲಿಯೂ ಕಾಣದಂತಹ ಸ್ಪಷ್ಟವಾದ ವೈರುಧ್ಯತೆಗಳು ಗಮನಾರ್ಹವಾಗಿ ಬೆಳೆಯತೊಡಗಿರುವ ಬೆರಳೆಣಿಕೆಯ ಬಂಡವಾಳಶಾಹೀ ಭೂಮಾಲಿಕ ಕುಟುಂಬಗಳ ಹಾಗೂ ಕಾರ್ಮಿಕರು, ರೈತರು, ಮಧ್ಯಮ ವರ್ಗದ ನೌಕರರು, ಬುದ್ಧಿ ಜೀವಿಗಳು, ಗ್ರಾಮೀಣ ದುಡಿಯುವ ಜನಸಮೂಹದ ನಡುವೆ ಕಾಣುತ್ತಿದ್ದೇವೆ. ದೇಶದ ಅತ್ಯಂತ ದೊಡ್ಡ ವಾಣಿಜ್ಯೋದ್ಯಮಿಗಳಾದ ಟಾಟಾ-ಬಿರ್ಲಾಗಳ ಬಂಡವಾಳ 1948ರಲ್ಲಿ ತಲಾ 80 ಕೋಟಿಯಿಂದ ಕ್ರಮವಾಗಿ 589.42 ಕೋಟಿ ಹಾಗೂ 641.93 ಕೋಟಿಗಳಷ್ಟು ಹೆಚ್ಚಾಯಿತು; ನಂತರದ ಆರು ವರ್ಷಗಳಲ್ಲಿ ಅಂದರೆ 1978ರ ವೇಳೆಗೆ ಇವರ ಬಂಡವಾಳ ಕ್ರಮವಾಗಿ 1102 ಕೋಟಿ ಹಾಗೂ 1119 ಕೋಟಿಯಷ್ಟು ಏರಿತು ಮತ್ತು 1979ರ ಹೊತ್ತಿಗೆ ಇವರುಗಳ ಬಂಡವಾಳ ತಲಾ 1310 ಕೋಟಿಗಳಷ್ಟಾಯಿತು.

ಟಾಟಾ - ಬಿರ್ಲಾಗಳು ಮಾತ್ರವೇ ಅಲ್ಲದೆ ಇತರ ಬಂಡವಾಳಗಾರರೂ, ಭೂಮಾಲೀಕರೂ ಸಣ್ಣ ಪ್ರಮಾಣದವರಾಗಿದ್ದರೂ ಕೂಡ ಈ ಅವಧಿಯಲೀ ಟಾಟಾ-ಬಿರ್ಲಾಗಳಷ್ಟೇ ವೇಗವಾಗಿ ಬೆಳೆದಿದ್ದಾರೆ. ಮೇಲಿನಿಂದ ಕೆಳಗಿನವರೆಗೂ ಕೆಲವೇ ಬಂಡವಾಳಗಾರ-ಭೂಮಾಲೀಕರು ಈ ದೇಶದ ಆಗು ಹೋಗುಗಳನ್ನು ನಿಯಂತ್ರಿಸುತ್ತಿದ್ದಾರೆ. ನಮ್ಮ ದೇಶ ಪಡೆದ ಸ್ವಾತಂತ್ರ್ಯದಿಂದ ಲಾಭಗಳಿಸಿದವರು ಇವರೇ ಆಗಿದ್ದಾರೆ.

ಈ ಕೆಲವೇ ಜನರ ಬೆಳವಣಿಗೆಗೆ ವಿರುದ್ಧವಾಗಿ ನಿರುದ್ಯೋಗ ಹೆಚ್ಚಾಗುತ್ತಿದೆ. ಆದರೂ ಸರ್ಕಾರ ನಿರುದ್ಯೋಗದ ಸಾಮಾನ್ಯ ಮಟ್ಟವನ್ನು ಅಂದಾಜುಮಾಡಲು, ಉದ್ಯೋಗವಿನಿಮಯ ದಾಖಲೆಗಳನ್ನು ಕಾಪಾಡುವ ಅಗತ್ಯವೊದಗಿದೆ. ಉದ್ಯೋಗವಿನಿಮಯದ ದಾಖಲೆ ಪುಸ್ತಕಗಳಲ್ಲಿ ನೊಂದಾವಣೆಯಾಗಿರುವ ಹೆಸರುಗಳ ಸಂಖ್ಯೆ ಕೇವಲ ಹತ್ತು ವರ್ಷಗಳಲ್ಲಿ ಮೂರು ಪಟ್ಟು ಹೆಚ್ಚಾಗಿದೆ. 1971ರ ಕೊನೆಯ ಭಾಗದಲ್ಲಿ 5.1 ಮಿಲಿಯ ಇದದ್ದು 1981 ಮಧ್ಯ ಭಾಗದಲ್ಲಿ 16.2 ಮಿಲಿಯದಷ್ಟಾಯಿತು; ಇಂದು ಇದರ ಸಂಖ್ಯೆ 17.4 ಮಿಲಿಯನ್. ಉದ್ಯೋಗವಿನಿಮಯ ಕಚೇರಿಗಳನ್ನೇ ಕಾಣದ ಗ್ರಾಮಾಂತರ ಪ್ರದೇಶಗಳ ಮಿಲಿಯಗಟ್ಟಲೆ ನಿರುದ್ಯೋಗಿಗಳನ್ನು ಸೇರಿಸಿಕೊಳ್ಳಬೇಕಾಗಿದೆ. ಇವರ ಹೆಸರುಗಳು ವಿನಿಮಯಕಚೇರಿ ದಾಖಲೆಗಳಲ್ಲಿ ಸೇರಿಲ್ಲ.

ಇನ್ನು ಉದ್ಯೋಗದಲ್ಲಿರುವವರ ಪರಿಸ್ಥಿತಿ ಏನು ? ಕೈಗಾರಿಕಾ ಕ್ಷೇತ್ರದಲ್ಲಿ ಸೇರ್ಪಡೆಯಾಗುವ ಕಾರ್ಮಿಕರ ವೇತನದ ಮೌಲ್ಯ ಕುಸಿಯುತ್ತಿದೆ ಗ್ರಾಮೀಣ ಪ್ರದೇಶದ ಬಡವರ ವರಮಾನವೂ ಕೂಡ ಕಡಿಮೆಯಾಗುತ್ತಿದೆ.

ಇವೆಲ್ಲದರ ಫಲವಾಗಿ ಕೆಲವೇ ಮಂದಿ ನಗರ ಹಾಗೂ ಗ್ರಾಮೀಣ ಶ್ರೀಮಂತರ ಬಳಿ ಜಮಾಯಿಸುತ್ತಿರುವ ಅಗಾಧ ಪ್ರಮಾಣದ ಸಂಪತ್ತು ಕೇಂದ್ರೀಕರಣಗೊಳ್ಳುತ್ತಿದೆ. ಇದಕ್ಕೆ ವಿರುದ್ಧವಾಗಿ ನಗರ ಹಾಗೂ ಗ್ರಾಮೀಣ ಕ್ಷೇತ್ರಗಳ ಕಾರ್ಮಿಕ ಸಮುದಾಯದ ಜೀವನ ಮಟ್ಟ ಶೋಚನೀಯವಾಗಿ ಇಳಿಮುಖಗೊಳ್ಳುತ್ತಿದೆ.

ನಗರ ಹಾಗೂ ಗ್ರಾಮೀಣ ಪ್ರದೇಶಗಳ ಬಡ ಹಾಗೂ ಮಧ್ಯಮ ವರ್ಗಗಳ ಜನರಷ್ಟೇ ಬಡತನದಿಂದ ಬಳಲುತ್ತಿಲ್ಲ, ಬದಲಾಗಿ ಇಡೀ ದೇಶವೇ ಇಂದು ವಿಶ್ವ ಸಮುದಾಯದಲ್ಲಿ ತೀರಾ ದಾರಿದ್ರ್ಯ ಪೀಡಿತ ಹಾಗೂ ಹಿಂದುಳಿದ ರಾಷ್ಟ್ರವಾಗಿ ಪರಿಗಣಿಸಲ್ಪಟ್ಟಿದೆ. ವಿಶ್ವದ 125 ದೇಶಗಳ ಸ್ಥಿತಿಯನ್ನು ಕುರಿತು ವಿಶ್ವಬ್ಯಾಂಕ್ ನೀಡಿದ ವರದಿಯಲ್ಲಿ ಭಾರತದ ಸ್ಥಾನ ಕೊನೆಯ ದರ್ಜೆಯಲ್ಲಿ. ಈ ದರ್ಜೆಯಲ್ಲಿ ಕೂಡ ಸರಾಸರಿ ರಾಷ್ಟ್ರೀಯ ತಲಾವರು ವರಮಾನ 230 ಡಾಲರ್‌ಗಳಿದ್ದರೆ, ಭಾರತದ್ದು 190 ಡಾಲರ್‌ಗಳು.

ನಮ್ಮ ದೇಶ ವಿಶ್ವದ ಅತ್ಯಂತ ಬಡ ರಾಷ್ಟ್ರವಾಗಿ ಇರುವುದಕ್ಕೆ ಕಾರಣ 35 ವರ್ಷಗಳ ಬಂಡವಾಳಶಾಹೀ-ಭೂಮಾಲಿಕ ಆಡಳಿತವೇ ಆಗಿದೆ.

ನಾವು ಸ್ವಾತಂತ್ರ್ಯ ಗಳಿಸಿ 35 ವರ್ಷಗಳಾಗಿದ್ದರೂ ಕೂಡ ಹರಿಜನರ ಮತ್ತಿತರ ದುರ್ಬಲ ವರ್ಗಗಳ ಮೇಲಿನ ಆಕ್ರಮಣಗಳು ಅವ್ಯಾಹತವಾಗಿ ನಡೆಯುತ್ತಿದೆ. ಮಹಿಳೆಯರ ಮೇಲಿನ ದೌರ್ಜನ್ಯಗಳು ಹೆಚ್ಚುತ್ತಲೇ ಇವೆ. ವರದಕ್ಷಿಣೆ ಸಂಬಂಧವಾಗಿ ಎಳೆಯ ಹುಡುಗಿಯರನ್ನು ಬೆಂಕಿಯಲ್ಲಿ ಸುಟ್ಟು ಕೊಲ್ಲುವ ಸುದ್ದಿ ಪ್ರತಿ ದಿನವೂ ಬರುತ್ತಲೇ ಇದೆ. ಕೊಲೆ, ಡಕಾಯಿತಿ, ಬ್ಯಾಂಕ್ ಲೂಟಿಗೆ ಸಂಬಂಧಿಸಿದ ವರದಿಗಳು ಕಾನೂನು ಮತ್ತು ಶಿಸ್ತುಪಾಲನೆ ಮುರಿದು ಬಿದ್ದಿರುವುದನ್ನು ಸೂಚಿಸುತ್ತವೆ. ಈ ಎಲ್ಲ ಘಟನೆಗಳ ಹಿನ್ನೆಲೆಯಲ್ಲಿ ಆಳುವ ವರ್ಗದ ರಾಜಕಾರಣಿಗಳ, ಪೋಲೀಸರ ಒಂದು ವಿಭಾಗದ ಮತ್ತು ಸಮಾಜ ವಿರೋಧೀ ಶಕ್ತಿಗಳ ಸ್ಪಷ್ಟ ಕೈವಾಡವಿರುವುದು ನಿಜ ಸಂಗತಿ. ಸಾಮಾಜಿಕ ಮತ್ತು ನೈತಿಕ ಮೌಲ್ಯಗಳು ಶಿಥಿಲಗೊಂಡು ಭ್ರಷ್ಟಾಚಾರವೇ ಒಂದು ಜೀವನ ಮಾರ್ಗವಾಗಿದೆ.

ಆಳುವ ಕಾಂಗ್ರೆಸ್ (ಐ)ನ ನೇತಾರರಾಗಲೀ ಅಥವಾ ಬಂಡವಾಳಶಾಹೀ ವಿರೋಧ ಪಕ್ಷಗಳ ನೇತಾರರಾಗಲೀ ಅವರಿಗೆ ತಿಳಿದಿರುವ ಒಂದೇ ದಾರಿಯೆಂದರೆ ಬಹು ರಾಷ್ಟ್ರೀಯ ಖಾಸಗಿ ಕಂಪೆನಿಗಳಿಂದಲೋ ಅಥವಾ ಜಾಗತಿಕ ಗುತ್ತೇದಾರಿ ಬಂಡವಾಳಗಾರರ ಹಣಕಾಸು ಏಜೆಸ್ಸಿಗಳಾದ ಅಂತರರಾಷ್ಟ್ರೀಯ ಹಣಕಾಸು ನಿಧಿ (ಐ ಎಂ ಎಫ್.) ಅಥವಾ ವಿಶ್ವ ಬ್ಯಾಂಕ್‌ಗಳಿಂದಲೋ "ನೆರವು" ಪಡೆಯುವುದು.

ನಮ್ಮ ಪ್ರಧಾನಿಯವರ ಇತ್ತೀಚಿನ ಅಮೇರಿಕಾ ಮತ್ತು ಜಪಾನ್ ಭೇಟಿಯ ಸಂಧರ್ಭದಲ್ಲಿ ಈ ಎರಡೂ ರಾಷ್ಟ್ರಗಳ ಸರ್ಕಾರಗಳಿಗೆ ಹಾಗೂ ಅಲ್ಲಿನ ಬಹುರಾಷ್ಟ್ರೀಯ ಖಾಸಗಿ ಸಂಸ್ಥೆಗಳಿಗೆ ಹಣಕಾಸಿನ ಹಾಗೂ ತಾಂತ್ರಿಕ 'ನೆರವು' ನೀಡಬೇಕೆಂದು ಮಾಡಿಕೊಂಡ ಮನವಿಗಳನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದು. ಇದು ಮೂವತ್ತೈದು ವರ್ಷಗಳ ಹಿಂದೆ ಕಾಂಗ್ರೆಸ್ ಸರ್ಕಾರ ಅಳವಡಿಸಿಕೊಂಡ ಒಂದು "ಅಭಿವೃದ್ಧಿ ತಂತ್ರ", ಮತ್ತು ಇದನ್ನು ಜನತಾ, ಲೋಕದಳ ಹಾಗೂ ಈಗಿನ ಸರ್ಕಾರಗಳು ಮುಂದುವರಿಸಿಕೊಂಡೇ ಬರುತ್ತಿವೆ.

ಇಂತಹ ವಿದೇಶೀ "ನೆರವು"ಗಳು ದೇಶದ ಅರ್ಥ ವ್ಯವಸ್ಥೆಯನ್ನು ಬಿಕ್ಕಟ್ಟಿನಿಂದ ಪಾರು ಮಾಡುವ ಬದಲು ದೇಶ, ಜಾಗತಿಕ ಬಂಡವಾಳಶಾಹಿಯ ಮೇಲೆ ಮತ್ತಷ್ಟು ಅವಲಂಬಿತವಾಗುತ್ತ ಬರುತ್ತಿದೆ. ದೇಶದ ನಿಜವಾದ ಸಮಸ್ಯೆಗಳಿಂದ ಜನತೆಯನ್ನು ವಿಮುಖಗೊಳಿಸುವ ಸಲುವಾಗಿ ಆರನೆಯ ಯೋಜನೆಯು ತಿರುಳು ಎಂದು ಕರೆದುಕೊಂಡ ಮತ್ತೊಂದು ಇಪ್ಪತ್ತು ಅಂಶದ ಕಾರ್ಯಕ್ರಮದೊಂದಿಗೆ ಜನತೆಯನ್ನು ವಂಚಿಸಲು ಹೊರಟಿದ್ದಾರೆ. ಮೊದಲನೆಯ ಇಪ್ಪತ್ತು ಅಂಶದ ಕಾರ್ಯಕ್ರಮವನ್ನು 1975ರಲ್ಲಿ ದೇಶದಲ್ಲಿ ಆಂತರಿಕ ತರ್ತು ಪರಿಸ್ಥಿತಿಯನ್ನು ಘೋಷಿಸುವುದರೊಂದಿಗೆ ಪ್ರಕಟಿಸಲಾಗಿತ್ತು. ಆ ಕಾರ್ಯಕ್ರಮ ಕೇವಲ ಬೂಟಾಟಿಕೆಯದೆಂದು ನಿರೂಪಿತಗೊಂಡಿದೆ. ಈಗಿನದೂ ಕೂಡ ಅದಕ್ಕಿಂತ ಭಿನ್ನವಾಗೇನೂ ಇಲ್ಲ. ವಾಸ್ತವತೆಯು ಇವುಗಳನ್ನು ಸಂಪೂರ್ಣವಾಗಿ ಮೋಸವೆಂಬುದನ್ನು ಬಹಿರಂಗಗೊಳಿಸಿವೆ. ಆದ್ದರಿಂದ ಪ್ರಜಾಸತ್ತಾತ್ಮಕ ಮತ್ತು ತೀವ್ರಗಾಮಿ ಶಕ್ತಿಗಳು ಈ ದೇಶದಲ್ಲಿ ಕಾಂಗ್ರೆಸ್, ಜನತಾ, ಲೋಕದಳ ಸರ್ಕಾರಗಳ ನೀತಿಗಳನ್ನು ಹಿಂದೆ ವಿರೋಧಿಸಿದ್ದ ಮತ್ತು ಈಗಿನ ಕಾಂಗ್ರೆಸ್ (ಐ) ಸರ್ಕಾರವನ್ನು ವಿರೋಧಿಸುತ್ತಿರುವುದು ಸಹಜವೇ ಆಗಿದೆ.

ಸಾರ್ವತ್ರಿಕ ವಿಚಾರಗಳಿಗೆ ಸಂಬಂಧಿಸಿದಂತೆ ಐಕ್ಯ ಕಾರ್ಯಾಚರಣೆ, ಸರ್ಕಾರದ ಪ್ರಜಾಪ್ರಭುತ್ವ ವಿರೋಧೀ ಕ್ರಮಗಳಿಗೆ ಐಕ್ಯ ಪ್ರತಿರೋಧ, ಆಳುವ ವರ್ಗದ ಕಾರ್ಯಕ್ರಮಗಳಿಗೆದುರಾಗಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಬದಲಿ ಕಾರ್ಯಕ್ರಮದ ಆಧಾರದ ಮೇಲೆ ಒಟ್ಟುಗೂಡುವುದು—ಇವು ಎಡ-ಪ್ರಜಾಪ್ರಭುತ್ವ ಶಕ್ತಿಗಳು ಆಳುವ ವರ್ಗದ ವಿರುದ್ಧ ಸಾರುವ ಮೂರು ರೀತಿಯ ಆಕ್ರಮಣಗಳಾಗುತ್ತವೆ.

ಕಳೆದ ವರ್ಷದ ಸ್ವಾತಂತ್ರ್ಯ ದಿನದಿಂದೀಚೆಗೆ ದೇಶವು ಜನತೆಯ ಮೇಲೆ ಆಳುವ ವರ್ಗಗಳು ನಡೆಸಿದ ತೀವ್ರವಾದ ಆಕ್ರಮಣಗಳನ್ನು ವಿರೋಧ ಪಕ್ಷಗಳ ಮೇಲೆ ನಡೆಸಿದ ಧಾಳಿಗಳನ್ನು, ಅದೇ ರೀತಿಯಲ್ಲಿ ಹೋರಾಟಗಾರರ ಮತ್ತು ಅವರ ಪಕ್ಷಗಳ ಐಕ್ಯ ಪ್ರತಿರೋಧಗಳನ್ನು ಕಂಡಿದೆ.

35 ವರ್ಷಗಳ ಹಿಂದೆ ಬ್ರಿಟಿಷರ ಆಡಳಿತದಿಂದ ಬಿಡುಗಡೆ ಪಡೆಯಲು ಜನತೆ ಮಾಡಿದ ತ್ಯಾಗ-ಬಲಿದಾನಗಳನ್ನು ಹೆಮ್ಮೆಯಿಂದ ಸ್ಮರಿಸುತ್ತಾ, ಪ್ರಜಾಪ್ರಭುತ್ವವಾದಿ ಶಕ್ತಿಗಳು, ಸಾಮಾನ್ಯ ಹಾಗೂ ರಾಜಕೀಯ ಪ್ರಶ್ನೆಗಳನ್ನು ಕುರಿತಂತೆ ಐಕ್ಯ ಕಾರ್ಯಾಚರಣೆಯನ್ನು ಬಲಪಡಿಸಲು ಪ್ರತಿಜ್ಞೆ ಕೈಗೊಳ್ಳುವುದು ಅತ್ಯವಶ್ಯ.

ಜನತೆಯ ಐಕ್ಯತೆಗೆ, ಅಷ್ಟೇ ಏಕೆ ಈ ದೇಶದ ಅಸ್ತಿತ್ವಕ್ಕೇ ಮಾರಕವಾಗಿರುವ ಪ್ರತ್ಯೇಕತಾವಾದೀ ಶಕ್ತಿಗಳ ವಿರುದ್ಧ ಇಂದು ನಾವು ಹೋರಾಟವನ್ನು ಸಂಘಟಿಸಬೇಕಾಗಿದೆ. ಅಸ್ಸಾಂ ಮತ್ತು ಈಶಾನ್ಯ ಭಾರತದ ಪ್ರತ್ಯೇಕತಾವಾದಿ ಶಕ್ತಿಗಳು, ಜಮ್ಮು ಮತ್ತು ಕಾಶ್ಮೀರದ ಇಸ್ಲಾಂ ಮೂಲಭೂತವಾದಿಗಳು, ಪಂಜಾಬಿನ ಸಿಖ್ ಉಗ್ರಗಾಮಿಗಳು, ಅದೇ ರೀತಿಯಲ್ಲಿ ದೇಶಾದ್ಯಂತ ಹರಡಿರುವ ಹಿಂದೂ ಪುನಶ್ಚೇತನವಾದಿಗಳು—ಇವರೆಲ್ಲರೂ ತಮ್ಮದೇ ರೀತಿಯಲ್ಲಿ ದೇಶದ ಸಮಗ್ರತೆಗೆ ಭೀತಿ ಒಡ್ಡಿದ್ದಾರೆ.

ಆದರೆ ಅದೇ ಸಮಯದಲ್ಲಿ ದೇಶಾದ್ಯಂತ ಕಮ್ಯೂನಿಸ್ಟರು, ಇತರ ವಾಮಪಂಥೀಯ ಶಕ್ತಿಗಳು ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವವಾದಿ ಶಕ್ತಿಗಳು ದೇಶದ ಸಮಗ್ರತೆಯನ್ನು ಕಾಪಾಡಲು ನಡೆಯುತ್ತಿರುವ ಹೋರಾಟದ ಮುಂಚೂಣಿಯಲ್ಲಿದ್ದಾರೆ. ಈ ಸಂಧರ್ಭದಲ್ಲಿ ನಾವು ಈ ಛಿದ್ರಕಾರೀ ಶಕ್ತಿಗಳ ವಿರುದ್ಧ ಒಗ್ಗಟನ್ನು ಮತ್ತಷ್ಟು ಬಲಪಡಿಸುವ ಪ್ರತಿಜ್ಞೆಯನ್ನು ಕೈಗೊಳ್ಳೋಣ.

ಇನ್ನೂ ಒಂದು ಹೋರಾಟವನ್ನು ನಾವಿಂದು ಕೈಗೊಳ್ಳಬೇಕಿದೆ ಅದು—ಅಮೇರಿಕನ್ ಸಾಮ್ರಾಜ್ಯಶಾಹಿಯ ಆಕ್ರಮಣದ ವಿರುದ್ಧ ನಡೆಯಬೇಕಿರುವ ಹೋರಾಟ. ನಮ್ಮ ಆಳುವ ವರ್ಗದ ನಾಯಕರು ಹೇರಲ್ಪಟ್ಟಿರುವ ವರ್ಗದೃಷ್ಟಿಯಿಂದಾಗಿ ನಾವು ವಿವಿಧ ಭೀತಿಗಳಿಂದ ಬಳಲುತ್ತಿದ್ದರೂ ಕೂಡ ಸಾಮ್ರಾಜ್ಯಶಾಹಿಗಳ ಆಟದ ಕಾಯಿಯಾಗಿ ನಮ್ಮ ದೇಶವನ್ನು ಬಳಸಿಕೊಳ್ಳುವುದಕ್ಕೆ ನಾವು ಅವಕಾಶ ನೀಡುವುದಿಲ್ಲ. ಸಿ. ಪಿ. ಐ. (ಎಂ) ನ ಹನ್ನೊಂದನೇ ಸಮ್ಮೇಳನದಲ್ಲಿ ವಿದೇಶಾಂಗ ನೀತಿಯ ಕುರಿತಾಗಿ ನಾವು ಗುರುತಿಸಿರುವ ಹಾಗೆ, ಇಂದಿರಾ ಗಾಂಧಿ ಸರ್ಕಾರ ಸರಿಯಾದ ನಿಲುವೆಯನ್ನೇ ಅನುಸರಿಸಿದೆ. ಸರ್ಕಾರ ತನ್ನ ನಿಲುಮೆಯಿಂದ ದೂರ ಸರಿಯಲು ಬೇಕಾದಂತಹ ಹೀನ ಪ್ರಯತ್ನಗಳು ನಡೆಯುತ್ತಿವೆ. ಇಂಥ ಪ್ರಯತ್ನಗಳನ್ನು ನಾವು ವಿಫಲಗೊಳಿಸುವುದಷ್ಟೇ ಅಲ್ಲದೆ ಸರ್ಕಾರವು ಇನ್ನೂ ಸ್ಪಷ್ಟವಾದ, ರಾಜೀಮಾಡಿಕೊಳ್ಳಲಾಗದಂತಹ ನಿಲುವನ್ನು ಅನುಸರಿಸಲು ಒತ್ತಾಯ ತರಬೇಕಾಗಿದೆ. ಸಾಮ್ರಾಜ್ಯಶಾಹಿಯ ಆಕ್ರಮಣಕಾರೀ ಕ್ರಮಗಳನ್ನು ವಿರೋಧಿಸಿ ದೇಶಾದ್ಯಂತ ನಡೆಸಲು ಉದ್ದೇಶಿಸಿರುವ ಆರು ಪಕ್ಷಗಳ ತೀರ್ಮಾನವು ಸರಿಯಾದ ದಿಕ್ಕಿನತ್ತ ಸಾಗುವ ಆರಂಭದ ಹೆಜ್ಜೆಯಾಗಿದೆ. ಇದು ಯಶಸ್ವಿಯಾಗಲು ನಾವು ಶಕ್ತಿಮೀರಿ ಪ್ರಯತ್ನಿಸಬೇಕಾಗಿದೆ.

35 ವರ್ಷಗಳ ಹಿಂದೆ ಬ್ರಿಟಿಷ್ ವಸಾಹತುಶಾಹಿಗಳನ್ನು ದೇಶದಿಂದ ತೊಲಗಿಸುವ ಹೋರಾಟದಲ್ಲಿ ಹುತಾತ್ಮರಾದವರ ಹೆಸರಿನಲ್ಲಿ ನಾವಿಂದು ಪ್ರತಿಜ್ಞೆ ಮಾಡಬೇಕಾಗಿದೆ—

'ಬಂಡವಾಳಶಾಹೀ-ಭೂಮಾಲಿಕ ಆಳುವ ವರ್ಗಗಳ ಜನ ವಿರೋಧೀ ನೀತಿಗಳನ್ನು ಸೋಲಿಸುತ್ತೇವೆ ಮತ್ತು ದೇಶವನ್ನು ಪ್ರಜಾಪ್ರಭುತ್ವದ ಹಾದಿಯಲ್ಲಿ ಮುನ್ನಡೆಸುತ್ತೇವೆ' ಎಂದು.

[ಪೀಪಲ್ಸ್ ಡೆಮಾಕ್ರಸಿ—ಆಗಸ್ಟ್ 15 ರ ಸಂಪಾದಕೀಯದಿಂದ]

ಕರ್ನಾಟಕ ರಾಜ್ಯದಲ್ಲಿ:

ಅಯ್ಯೋ ! ಇನ್ನೇನು ಮಾಡಲಿ ? ಕೈಬಿಟ್ಟು ಹೋಗುತ್ತದಲ್ಲಾ !

—ಎನ್ಕೆ

"ಕರ್ನಾಟಕ-ಆಂಧ್ರಗಳೆರಡು ನನ್ನ ಅವಳಿ ಜವಳಿ ಮುದ್ದಾಡುವ ಮಕ್ಕಳು. ಎಲ್ಲಿ ಈ ಮಕ್ಕಳನ್ನು ಕಳೆದುಕೊಳ್ಳುತ್ತೇನೋ, ಅಯ್ಯೋ, ನಾ ನೇ ನು ಮಾಡಲಿ !" ಎಂದು ನಿಟ್ಟುಸಿರು ಬಿಟ್ಟವರು ಇಂದಿರಾ ಗಾಂಧಿ. ಅವರ ಎದೆ ಢವಢವ ಮಾಡುತ್ತಿತ್ತಂತೆ. ಅದಾವ ಘಳಿಗೆಯಲ್ಲಿ ಗೊತ್ತೇ? ಗುಂಡೂರಾವ್-ಮಲ್ಲಣ್ಣನ ಗುಂಪು ಕೆ.ಟಿ.ರಾಠೋಡ್‌ರವರನ್ನ ಕಾಂಗ್ರೆಸ್ಸಿನಿಂದ ಸಸ್ಪೆಂಡ್ ಮಾಡಿದ್ದಾರೆಂಬ ಸುದ್ದಿ ತಿಳಿದ ಕೂಡಲೇ ಒಂದು ರಾಜ್ಯದ ಮುಖ್ಯ ಮಂತ್ರಿಯವರನ್ನು ಬಹಿರಂಗವಾಗಿಯೇ ಜಾತೀಯವಾದಿ, ಅಲ್ಪಕೋಮಿನ ವಿರೋಧಿ, ಭ್ರಷ್ಟಾಚಾರಿ ಎಂದೆಲ್ಲ ಬಯ್ಯುತ್ತಿದ್ದ ಕೆ. ಪಿ. ಸಿ. ಸಿ. ಅಧ್ಯಕ್ಷರನ್ನು ಬರೀ ಸಸ್ಪೆಂಡ್ ಮಾದ್ದ ಡಿಕ್ಕಲ್ಲ. ರಾಠೋಡರು ಹಿಂದುಳಿದ ಲಮಾಣಿ ಜಾತಿಗೆ ಸೇರಿದವರು. ಮುಂದಿನ ಚುನಾವಣೆಯಲ್ಲಿ ಲಮಾಣಿ ಜನರ ಮತ ತನ್ನ ಕೈಬಿಡಬಹುದಲ್ಲಾ ಎಂಬ ಚಿಂತೆ. ಅಷ್ಟೇ ಅಲ್ಲದೆ ನಾಲ್ಕು ತಿಂಗಳ ಹಿಂದೆ ಮತ್ತೊಬ್ಬ ಹಿಂದುಳಿದ ಮುಖಂಡ, ಮಂತ್ರಿಯಾಗಿದ್ದವ, ಕೆ. ಪಿ. ಸಿ. ಸಿ. ಅಧ್ಯಕ್ಷನಾಗಿದ್ದವ ಬಂಗಾರಪ್ಪನೂ ಅಲ್ಲಸಲ್ಲದ ಆರೋಪ ಹೊರಿಸಿ ಮನೆಬಿಟ್ಟಿದ್ದಾನಲ್ಲ. ಅವನಿಂದಾಗಿ ಹರಿಜನರ ಓಟು ಕೈಬಿಟ್ಟಂತಲ್ಲವೇ. ಹೀಗೆ ಹರಿಜನರು-ಲಮಾಣಿಯರೆಲ್ಲ ಕೈಬಿಟ್ಟದ್ದಾದರೆ, ಕೈಹಿಡಿಯುವವರಾರಿಲ್ಲಿ ಉಳಿದರು? ಎಂದೇ ಚಿಂತೆ. ದೇಶದಲ್ಲಿಯ ಎಲ್ಲಾ ರಾಜ್ಯಗಳೂ ಒಂದಲ್ಲ ಒಂದು ಕಾಲದಲ್ಲಿ ತನ್ನ ಕೈಬಿಟ್ಟಾಗ, ಕರ್ನಾಟಕ–ಆಂಧ್ರದ ಜನತೆ ತನಗೆ ಭದ್ರವಾಗಿ ಅಂಟಿಕೊಂಡಿದ್ದರು. ಈಗ ತನ್ನ ಸ್ಥಳೀಯ ಮುಖಂಡರ, ಮೂರ್ಖತನ, ದೂರದೃಷ್ಟಿಕೊನಗಳ ಅಭಾವದಿಂದಾಗಿ ಎಲ್ಲಿ ಕರ್ನಾಟಕ ಕೈಕೊಡುತ್ತದೊ ಎಂಬ ಅಂಜಿಕೆ ದಿಲ್ಲಿ ಕಾಂಗ್ರೆ ಮುಖಂಡರಲ್ಲಿ, ಅದರಲ್ಲೂ ಇಂದಿರಾ ಗಾಂಧಿಯವರಲ್ಲಿ ಮನೆಮಾಡಿದೆ. ಇಂದಿರಾ ಗಾಂಧಿಯು ಈ ಅಂಜಿಕೆಗೆ ಕಾರಣವೂ ಇದೆ. ಸ್ವಾತಂತ್ರ್ಯ ಹೋರಾಟ, ಸಂಸ್ಥಾನಗಳ ವಿಲಿನೀಕರಣ ಚಳುವಳಿ, ಏಕೀಕರಣ ಹೋರಾಟ ಹಾಗೆಯೇ ಇತ್ತೀಚಿನ ರೈತ ಚಳುವಳಿ, ಕಾರ್ಮಿಕ ಚಳುವಳಿಗಳ ಅನುಭವ ಕಂಡದ್ದಾದರೆ ಒಂದು ಸಂಗತಿ ಶತಸಿದ್ಧ. ಅದೇನೆಂದರೆ ಕುಂಭಕರ್ಣ ನಿದ್ರೆಯಲ್ಲಿರುವ ಕರ್ನಾಟಕ ಜನ ಒಮ್ಮೆ ಎದ್ದು ನಿಂತರೆ ಮಾತ್ರ ಯಾವುದಕ್ಕೂ ಅಂಜುವುದಿಲ್ಲ. ಗುಂಡೂರಾವ್ ಆಡಳಿತೆಯ ವಿರುದ್ಧ ಅಸಮಾಧಾನ ತುಂಬಿ ತುಳುಕುತ್ತಿರುವಾಗ, ಕಾಂಗ್ರೆ ಪಕ್ಷದೊಳಗೇ ಜಾತೀಯತೆ ಗೊಂದಲವೆಬ್ಬಿಸುತ್ತಿರುವಾಗ, ಕಚ್ಚಾಟ ನಡೆದಿರುವಾಗ, ಸಿ. ಪಿ. ಐ. (ಎಂ), ಸಿ.ಪಿ.ಐ, ಬಂಗಾರಪ್ಪ ಗುಂಪು, ಕ್ರಾಂತಿರಂಗ, ಜನತಾ ಪಾರ್ಟಿ ಎಲ್ಲರೂ ಕೂಡಿ ಕಾಂಗ್ರೆ ವಿರುದ್ಧ ಐಕ್ಯ ಹೋರಾಟ, ಚುನಾವಣೆಯಲ್ಲಿ ನೇರ ಸ್ಪರ್ಧೆಯ ಕುರಿತೆಲ್ಲ ಯೋಜನೆ ಹಾಕುತ್ತಿರುವಾಗಲೇ ಕಾಂಗ್ರೆಸಿನಿಂದ ರಾಠೋಡರ ಸಸ್ಪೆಂಡ್‌ನಿಂದಾಗಿ ಕರ್ನಾಟಕ ರಾಜ್ಯವೇ ಕೈಬಿಟ್ಟರೇನು ಗತಿ. ಕರ್ನಾಟಕ ಕೈಬಿಟ್ಟರೆ ಇಡೀ ದೇಶವೇ ಕೈಬಿಟ್ಟಂತೆ. ಆದ್ದರಿಂದಲೇ ರಾಠೋಡರ ಸಸ್ಪೆಂಡ್ ದಿಲ್ಲಿ ರಾಣಿಗೆ ನುಂಗಲಾರದ ತುತ್ತಾಗಿದೆ ನಿದ್ರೆಕೆಡಿಸುವ ಭೂತದ ಕನಸಾಗಿದೆ. ಎದ್ದೇಳು, ಎದ್ದೇಳು ಕೆಚ್ಚೆದೆಯ ಕನ್ನಡಿಗಾ ! ಅಮ್ಮಾವ್ರ ಕನಸು ನನಸಾಗಲಿ. ಕರ್ನಾಟಕ ಕಾಂಗ್ರೆಸ್ಸಿನ ಕೈಬಿಡಲಿ, ಪ್ರಜಾಪ್ರಭುತ್ವವನ್ನುಳಿಸಲಿಎಂಬ ಘೋಷಣೆ ಮುಗಿಲು ಮುಟ್ಟಲಿ. ಆ ದಿಸೆಯಲ್ಲಿ ದುಡಿಯೋಣ. ನಾವೂ ಬಂದೆವು, ನೀವೂ ಬನ್ನಿ, ಎಲ್ಲರೂ ಒಂದಾಗೋಣ. ಸರ್ವಾಧಿಕಾರಿ ಶಕ್ತಿಯನ್ನು ಸೋಲಿಸೋಣ.

ಪಿ.ಯು.ಸಿ. ಮಂಡಳಿಯ ದುರಂತಕತೆ

ಭ್ರಷ್ಟಾಚಾರ ಬರೀ ಭಾರತ ದೇಶದಲ್ಲಷ್ಟೇ ಅಲ್ಲ ಇಡಿ ಜಗತ್ತನ್ನೇ ಆವರಿಸಿದೆಂದು ಹೇಳಿ, ತನ್ನ ಆಡಳಿತೆಯಲ್ಲಿ ಕೊಳೆತು ನಾರುತ್ತಿರುವ ಭ್ರಷ್ಟಾಚಾರವನ್ನು ಇಂದಿರಾ ಗಾಂಧಿ ಬೆಂಬಲಿಸುತ್ತಿದ್ದಾರೆ. ಇತರ ಆಡಳಿತ ಯಂತ್ರಗಳಲ್ಲಿಯಂತೆಯೇ ಶಿಕ್ಷಣ ವಿಭಾಗದಲ್ಲೂ ಭ್ರಷ್ಟಾಚಾರ ಅತಿರೇಕದ ಮಟ್ಟವನ್ನು ತಲ್ಪಿದೆ. ತುಂಬಿದ ಕೊಡದಲ್ಲಿಯ ಹಾಲು ಚೆಲ್ಲುತ್ತಿರುವಂತೆಯೇ ರಾಜ್ಯದ ನಾನಾ ವಿಭಾಗಗಳ ಭ್ರಷ್ಟಾಚಾರದ ಅಪವಿತ್ರ ಕತೆಗಳು ಒಂದೊಂದೇ ಬೆಳಕು ಕಾಣುತ್ತಿವೆ. ನಮ್ಮ ರಾಜ್ಯದ ಶಿಕ್ಷಣ ಪದ್ಧತಿಯ ದೋಷ, ಶಿಥಿಲತೆಗಳಿಂದಾಗಿ ಪರೀಕ್ಷೆ ನಡೆದಾಗ, ಶಿಕ್ಷಣ ಸಂಸ್ಥೆಗಳ, ಪಾಲಕರ ಬೆಂಬಲದಿಂದಲೇ ವಿದ್ಯಾರ್ಥಿಗಳು ಸಲೀಸಾಗಿ ಕಾಪಿ ಮಾಡುವ ಪರಿಪಾಠವನ್ನು ಸರಕಾರ ಹಿಡಿತದಲ್ಲಿ ತರಲು ಪ್ರಯತ್ನ ಮಾಡುತ್ತಿರುವಾಗಲೇ ಪಿ.ಯು.ಸಿ. ಮಂಡಳಿ ನಡೆಸಿದ ಮರುಸಂಕಲನದಲ್ಲ ಭಯಂಕರ ಅಕ್ರಮಗಳು ನಡೆದ ಘಟನೆ ಬಯಲಾಗಿದೆ. ಪರಿಣಾಮವಾಗಿ ಪಿ.ಯು.ಸಿ ಯ ಅಧ್ಯಕ್ಷರನ್ನೊಳಗೊಂಡು ಹಲವಾರು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಲಾಗಿದೆ.

ಕೈಗಾರಿಕಾ ಖಾತೆಯಲ್ಲಿದ್ದಾಗ ಈಗಿನ ಪಿ.ಯು.ಸಿ. ಅಧ್ಯಕ್ಷ ಸತೀಶ್ ಅವರು ಒಳ್ಳೆ ಆಡಳಿತಾಧಿಕಾರಿ ಎಂದು ಹೆಸರು ಗಳಿಸಿದವರು. ಆದರೆ ಪಿ.ಯು.ಸಿ. ಬೋರ್ಡಿನ ಅಧ್ಯಕ್ಷರಾಗಿ ಸಸ್ಪೆಂಡ್ ಆಗಿದ್ದಾರೆ.

ಈಗಿರುವ ಕಾಂಗ್ರೆಯ ಬಂಡವಾಳದಾರ–ಭೂಮಾಲಿಕ ವರ್ಗದ ಆಡಳಿತೆಯಲ್ಲಿ ಭ್ರಷ್ಟಾಚಾರ, ಸ್ವಜನ ಪಕ್ಷಪಾತಗಳು ಮನೆ ಮಾಡಿವೆ. ಇಂಥ ಸರಕಾರದ ವಿರುದ್ಧ ಹೋರಾಡಬೇಕೆಂದೂ, ಎಡ ಮತ್ತು ಪ್ರಜಾಪ್ರಭುತ್ವರಂಗದ ಬದಲಿ ಸರಕಾರ ಸ್ಥಾಪಿಸಲು ದುಡಿಯಬೇಕೆಂದೂ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ ಹೇಳುತ್ತಿದೆ.

ಕೇಂದ್ರ ಸರಕಾರ ಕ್ಯಾಪಿಟೇಶನ್ ಫೀ ರದ್ದು ಮಾಡಬೇಕೆಂದು ಹೇಳುತ್ತಿದ್ದರೂ ಕೂಡ ಗುಂಡೂರಾವ್ ಸರಕಾರ ಮೇಲಿನ ಆದೇಶದಂತೆ ವರ್ತಿಸದಿರುವುದರಿಂದ ತಮ್ಮ ಮಕ್ಕಳಿಗೆ ಇಂಜಿನಿಯರಿಂಗ್, ಮೆಡಿಕಲ್ ಕಾಲೇಜುಗಳಲ್ಲಿ ಪ್ರವೇಶ ದೊರಕಿಸುವ ಪ್ರಶ್ನೆ ಪಾಲಕರನ್ನು ಕಾಡುತ್ತಿದೆ. ಐವತ್ತು ಸಾವಿರದಿಂದ ಒಂದೂವರೆ ಲಕ್ಷದವರೆಗೆ ಕ್ಯಾಪಿಟೇಶನ್ ಫೀ ಕೊಡುವುದನ್ನು ತಪ್ಪಿಸಲು ಐದಾರೂ ಸಾವಿರ ರೂಪಾಯಿ ಪಿ.ಯು.ಸಿ. ಬೋರ್ಡಿನಲ್ಲೂ, ತಮ್ಮ ಮಕ್ಕಳ ಪರೀಕ್ಷಾ ಪತ್ರಿಕೆಗಳನ್ನು ತಪಾಸು ಮಾಡುವವರಿಗೂ ಖರ್ಚು ಮಾಡುತ್ತಿದ್ದಾರೆ ಹಲವಾರು ಪಾಲಕರು.

ಪಿ.ಯು.ಸಿ. ಬೋರ್ಡಿನಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ಬಂಡವಾಳಶಾಹಿ, ಭೂಮಾಲಿಕ ವರ್ಗದ ಆಡಳಿತೆಗೆ ನೇರವಾಗಿ ಸಂಬಂಧಪಟ್ಟಿದೆ ಕ್ಯಾಪಿಟೇಶನ್ ಫೀ ರದ್ದಾಗಬೇಕು, ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆಯಾಗಬೇಕು, ಯಾವ ಪ್ರತಿಬಂಧವಿಲ್ಲದೇ ಸರಿಯಾಗಿ ಶಿಕ್ಷಣಕ್ಕೆ ಪ್ರವೇಶ ಸಿಗಬೇಕು. ಇದಕ್ಕಾಗಿ ವಿದ್ಯಾರ್ಥಿಗಳೂ, ಪಾಲಕರೂ ಹೋರಾಡಬೇಕು. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ ಅಂಥ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡುತ್ತದೆ.

ಸಹಕಾರಿ ಸಂಘಗಳ, ನಗರಸಭೆಗಳ ಚುನಾವಣೆ ಮುಂದಕ್ಕೆ

ರಾಜ್ಯ ಸಹಕಾರಿ ಸಂಘಗಳ ಸರ್ವ ಸದಸ್ಯರ ಸಭೆ ನಡೆಸುವುದನ್ನು ರಾಜ್ಯ ಸರಕಾರ ಮಾರ್ಚ್ ತಿಂಗಳವರೆಗೆ ಮುಂದವರಿಸಿದೆ. ಎಂಬ ಸುದ್ದಿ ಪ್ರಕಟವಾಗಿದೆ.

ಇಂದಿರಾ ಗಾಂಧಿಯ ಪ್ರಭಾವದಿಂದ ನಮ್ಮ ರಾಜ್ಯದಲ್ಲಿ ವಿಧಾನ ಸಭೆ, ಲೋಕ ಸಭೆಗೆ ಆರಿಸಿ ಬರುವುದು ಸುಲಭ. ಆದರೆ ಪಂಚಾಯಿತಿ, ನಗರ ಸಭೆ, ನಗರ ಕಾರ್ಪೊರೇಶನ್, ಸಹಕಾರಿ ಸಂಘಗಳಿಗೆ ತಮ್ಮವರನ್ನು ಆರಿಸಿತರುವುದು ಕಾಂಗ್ರೆಗೆ ಬಹಳ ಕಷ್ಟದ ಕೆಲಸ. ಈಗಂತೂ ಗುಂಡೂರಾವ್ ಸರಕಾರದ ಭ್ರಷ್ಟಾಚಾರದ ಕತೆಗಳೆಲ್ಲ ಮನೆಮಾತಾಗಿರುವಾಗ ಯಾವ ಚುನಾವಣೆಯಲ್ಲೂ, ಗೆಲ್ಲುವ ಸಂಭವವೇ ಇಲ್ಲೆಂದು ತಿಳಿದಾಗ ಇಂಥ ಪ್ರಕಟಣೆ ಹೊರಡಿಸದೆ ಮತ್ತೇನು ಮಾಡಲು ಸಾಧ್ಯ ? ನೀವೇ ಹೇಳಿ.

ಗುಂಡೂರಾವ್ ಸರಕಾರ ಇರುವತನಕ ನಗರ ಸಭೆ, ಸಹಕಾರಿ ಸಂಘಗಳಿಗೆ ಚುನಾವಣೆ ನಡೆಯುವುದಿಲ್ಲೆಂದು ಐಕ್ಯರಂಗ ತನ್ನ ಸ್ಪಷ್ಟ ಅಭಿಪ್ರಾಯವನ್ನು ಈ ಮುಂಚೆಯೂ ಪ್ರಕಟಿಸಿತ್ತು. ಸರಕಾರದ ಈ ನೀತಿಯ ವಿರುದ್ಧ ಹೋರಾಡಬೇಕೆಂದೂ ಕರೆ ಕೊಟ್ಟಿತ್ತು. ಆದರೆ ನಮ್ಮ ರಾಜ್ಯದ ವಿರೋಧಿ ಪಕ್ಷಗಳು ಈ ಸಮಸ್ಯೆಯ ಮಹತ್ವವನ್ನು ತಿಳಿದುಕೊಂಡಿಲ್ಲ. ಹೋರಾಟದ ಕಣಕ್ಕಿಳಿದಿಲ್ಲ. 1983ರಲ್ಲಿ ವಿಧಾನ ಸಭೆಗೆ ಸಾರ್ವತ್ರಿಕ ಚುನಾವಣೆ ನಡೆಯಲಿದೆ. ಅದೇ ಸಮಯದಲ್ಲಿ ಲೋಕಸಭೆಯ ಚುನಾವಣೆಯನ್ನೂ ಇಂದಿರಾ ಗಾಂಧಿ ಸಾರಬಹುದು ಇಂಥ ಸಂಧಿಗ್ಧ ಕಾಲದಲ್ಲಿ ಸ್ಥಳೀಯ ಸಂಸ್ಥೆಗಳಿಗೆ, ಸಹಕಾರಿ ಸಂಘಗಳಿಗೆ ಕೂಡಲೇ ಚುನಾವಣೆ ನಡೆಸಬೇಕೆಂದು ಚಳುವಳಿ ಹೂಡಿದ್ದಾದರೆ, ಮುಂಬರುವ ಸಾರ್ವತ್ರಿಕ ಚುನಾವಣೆಗೆ ಅದು ಸಹಾಯವಾಗಬಹುದೆಂಬುದನ್ನು ವಿರೋಧಿ ಪಕ್ಷಗಳು ಅರಿತು ಸಂಯುಕ್ತ ಹೋರಾಟದ ಕಾರ್ಯಕ್ರಮ ರೂಪಿಸಿಕೊಳ್ಳುವುದು ಅತ್ಯಗತ್ಯ.

O

ಕಾಮ್ರೇಡ್ ಭುಲ್ಲಾರ್

ಸಿ ಪಿ ಐ. (ಎಂ) ಪಂಜಾಬ್ ರಾಜ್ಯ ಸಮಿತಿ ಸದಸ್ಯ, ಅಮೃತಸರ ಜಿಲ್ಲಾ ಕಾರ್ಯದರ್ಶಿ ಕಾಂ। ಫೌಜಾಸಿಂಗ್ ಭುಲ್ಲಾರ್ ಅವರು ಆಗಸ್ಟ್ 11 ರಂದು ಅಮೃತಸರದಲ್ಲಿ ನಿಧನರಾದ ವರದಿ ಬಂದಿದೆ. ಅವರಿಗೆ 80 ವರ್ಷ ವಯಸ್ಸಾಗಿತ್ತು.

ತಮ್ಮ ಜೀವನದಲ್ಲಿ 60 ವರ್ಷಗಳಿಂದ ಶೋಷಣೆಗೊಳಗಾದವರ ಉನ್ನತಿಗೆ ಶ್ರಮಿಸಿದ್ದ ಕಾಂ। ಭುಲ್ಲಾರ್ ಅವರು ಅಪಾರ ತ್ಯಾಗ ಮತ್ತು ಸ್ಪೂರ್ತಿದಾಯಕ ಹೋರಾಟಗಳಿಂದ ಆದರ್ಶಪ್ರಾಯರಾಗಿದ್ದರು.

ಕಾಂ। ಭುಲ್ಲಾರ್ ತಮ್ಮ ಹದಿನೆಂಟರ ಹರೆಯದಲ್ಲೇ ಸಂಗಾತಿ ಸೋಹನ್ ಸಿಂಗ್ ಜೋಶ್ (ಸಿ.ಪಿ ಐ. ನ್ಯಾಷನಲ್ ಕೌನ್ಸಿಲ್ ಸದಸ್ಯರಾಗಿದ್ದ ಕಾಂ। ಜೋಶ್ ಇತ್ತೀಚೆಗೆ ಅಂದರೆ ಜುಲೈ 29 ರಂದು ಅಮೃತಸರದಲ್ಲೇ ನಿಧನರಾದರು) ರೊಂದಿಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದ್ದರು. 1934ರಲ್ಲಿ ಪಂಜಾಬಿನಲ್ಲಿ ಕಮ್ಯೂನಿಸ್ಟ್ ಪಕ್ಷವನ್ನು ಕಟ್ಟಿದವರಲ್ಲಿ ಕಾಂ। ಭುಲ್ಲಾರ್ ಒಬ್ಬರು.

ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ್ದಕ್ಕಾಗಿ, ಸ್ವಾತಂತ್ರ್ಯಾನಂತರ ಭೂಮಾಲೀಕ-ಬಂಡವಾಳಶಾಹಿ ಕಾಂಗ್ರೆಸ್ ಸರಕಾರದ ವಿರುದ್ಧ ಅನವರತ ಹೋರಾಡಿದ್ದಕ್ಕಾಗಿ ಕಾಂ। ಭುಲ್ಲಾರ್ ಅನೇಕ ವರ್ಷ ಜೈಲುವಾಸ ಅನುಭವಿಸಿದ್ದರು.

ಪಕ್ಷ ಇಬ್ಭಾಗವಾದಾಗ ಪರಿಷ್ಕರಣವಾದದ ವಿರುದ್ಧ ತೀವ್ರ ಹೋರಾಡಿದ ಕಾಂ। ಭುಲ್ಲಾರ್ ಅಮೃತಸರ ಜಿಲ್ಲೆಯ ಬಹುಸಂಖ್ಯಾತ ಸಂಗಾತಿಗಳೊಂದಿಗೆ ಸಿ.ಪಿ ಐ. (ಎಂ)ನ್ನು ಬಲಪಡಿಸಿದರು.

ತಮ್ಮ ಜೀವನದಲ್ಲಿ 11 ವರ್ಷಗಳಷ್ಟು ಕಾಲ ಜೈಲುವಾಸ ಅನುಭವಿಸಿದ್ದ ಕಾಂ। ಭುಲ್ಲಾರ್, ನಾಲ್ಕು ವರ್ಷ ಭೂಗತರಾಗಿದ್ದರು.

ಚಿಕ್ಕ ರೈತ ಕುಟುಂಬದಿಂದ ಬಂದ ಕಾಂ। ಫೌಜಾಸಿಂಗ್ ಭುಲ್ಲಾರ್ ತಮ್ಮ ಅಪಾರ ತ್ಯಾಗ, ಕಾರ್ಯಕ್ಷಮತೆಯಿಂದಾಗಿ ಆದರ್ಶಪ್ರಾಯರಾಗಿದ್ದರು. ರಾಜ್ಯದ ಎಲ್ಲ ವಿಭಾಗಗಳ ಜನತೆಗೆ ಪ್ರೀತಿಪಾತ್ರರಾಗಿದ್ದರು.

ಸಿಮೆಂಟ್ ಕಾರ್ಮಿಕರ ಸಮಾವೇಶ

ಕಾಂಗ್ರೆ ಕಾರ್ಮಿಕ ಮುಖಂಡರ ಮೋಸ ಬಯಲಿಗೆಳೆಯಿರಿ

ರಾಮಾನುಜಂ - ತ್ರಿವೇದಿ ಕಾಂಗ್ರೆ ಕಾರ್ಮಿಕ ಮುಖಂಡರು, ಸಿಮೆಂಟ್ ಕಂಪೆನಿ ಮಾಲಿಕರ ಮತ್ತು ಕೇಂದ್ರ ಸರಕಾರದ ಸಹಾಯದಿಂದ 60 ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಒಂದು ಲಕ್ಷ ಸಿಮೆಂಟ್ ಕಾರ್ಮಿಕರನ್ನು ಮೋಸದಿಂದ ಸುಲಿಯುತ್ತಿದ್ದು, ಇದರ ವಿರುದ್ಧ ಹೋರಾಡಬೇಕೆಂದು ದಕ್ಷಿಣ ವಲಯದ (ಕರ್ನಾಟಕ, ಆಂಧ್ರ, ತಮಿಳುನಾಡು, ಕೇರಳ) ಸಿಮೆಂಟ್ ಕೆಲಸಗಾರರ ಸಮಾವೇಶದಲ್ಲಿ ಕರೆ ಕೊಡಲಾಯಿತು. ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ., ಎಲ್.ಪಿ.ಎಫ್. (ಡಿ.ಎಂ.ಕೆ.), ಬಿ.ಎಂ.ಎಸ್. ನೇತೃತ್ವದ ಕಾರ್ಮಿಕರ ಸಮಾವೇಶ ಆಗಸ್ಟ್ 27 ರಂದು, ತಿರುಚಿನಾಪಳ್ಳಿ ಜಿಲ್ಲೆಯ ಕರೂರಿನಲ್ಲಿ ಸೇರಿತ್ತು. 4 ರಾಜ್ಯಗಳಿಂದ 200ಕ್ಕೂ ಮೇಲ್ಪಟ್ಟು ಪ್ರತಿನಿಧಿಗಳು ಭಾಗವಹಿಸಿದ್ದರು.

ತಮಿಳುನಾಡು ಸಿ. ಐ. ಟಿ. ಯು. ಅಧ್ಯಕ್ಷ ಕೆ. ರಮಣಿ, ಕೆ. ವೈದ್ಯನಾಥನ್, ಕರ್ನಾಟಕ ಸಿ. ಐ. ಟಿ. ಯು. ಉಪಾಧ್ಯಕ್ಷ ಎಸ್.ಕೆ. ಉಪಾಧ್ಯಾಯ, ತಮಿಳುನಾಡು ಎ. ಐ. ಟಿ. ಯು. ಸಿ. ಅಧ್ಯಕ್ಷ ಎಂ. ಕಲ್ಯಾಣ ಸುಂದರಂ, ಕೆ. ಎಸ್. ಸೋಮು, ಡಿ.ಎಂ.ಕೆ.ಯ ಎಲ್. ಪಿ. ಎಫ್. ಮುಖಂಡ ಟಿ. ಪಿ. ಮೂರ್ತಿ ಮೊದಲಾದವರು ಪ್ರತಿನಿಧಿಗಳನ್ನುದ್ದೇಶಿಸಿ ಭಾಷಣ ಮಾಡಿದರು

ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ., ಎಲ್. ಪಿ. ಎಫ್. ಕೇಂದ್ರ ಕಾರ್ಮಿಕ ಸಂಘಗಳು ಮಂಡಿಸಿದ ಬೇಡಿಕೆಗಳನ್ನೆಲ್ಲ ಬಿಟ್ಟು ಬರೇ ಐ. ಎನ್. ಟಿ. ಯು. ಸಿ. ಯವರ ಬೇಡಿಕೆಗಳನ್ನಷ್ಟೆ ಪಂಚಾಯಿತಿಗೆ ಒಪ್ಪಿಸಿ, ರಾಮಾನುಜಂ ಅವರನ್ನು ಕಾರ್ಮಿಕರ ಪರವಾಗಿ ಪಂಚಾಯತಿ ಸದಸ್ಯರನ್ನಾಗಿ ಮಾಡಿರುವುದರ ಉದ್ದೇಶ ತನ್ನ ನಲ್ಮೆಯ ಕಾರ್ಮಿಕ ಸಂಘಟನೆಗೆ ಮಹತ್ವ ಕೊಡುವುದೇ ಕೇಂದ್ರ ಸರಕಾರದ ಉದ್ದೇಶವಾಗಿದೆ. ಎಲ್ಲ ಕೇಂದ್ರ ಕಾರ್ಮಿಕ ಸಂಘಗಳ ಪ್ರತಿನಿಧಿಗಳನ್ನೊಳಗೊಂಡ ಪಂಚಾಯಿತಿಯಲ್ಲೇ ಬೇಡಿಕೆಗಳು ನಿಷ್ಕರ್ಷೆಯಾಗಬೇಕು. ಇಲ್ಲವಾದರೆ ಈಗಿರುವ ಪಂಚಾಯತಿಯ ಒಪ್ಪಂದ ನಮ್ಮ ಕಾರ್ಮಿಕರಿಗೆ ಬಂಧನಕಾರಕವಲ್ಲೆಂದು ಸಾರುವ, ಈ ಬೇಡಿಕೆಯನ್ನು ಸರಕಾರ ಮಾನ್ಯ ಮಾಡದಿದ್ದಲ್ಲಿ ಸರಕಾರದ ಧೋರಣೆ ವಿರುದ್ಧ ದೇಶದಾದ್ಯಂತ ಮುಷ್ಕರ ಹೂಡುವಂಥ ಕ್ರಮಕ್ಕೆ ಕಾರ್ಮಿಕರು ಸಿದ್ಧರಾಗಬೇಕೆಂದೂ ಕರೆ ಕೊಡುವ ಹಾಗೆಯೇ ಸಿಮೆಂಟಿನ ಬೆಲೆ ಹೆಚ್ಚಿಸುವ ಸರಕಾರದ ನೀತಿಯಿಂದಾಗಿ, ಮಾಲಿಕವರ್ಗ ಅಪಾರ ಲಾಭ ಗಳಿಸುತ್ತಿರುವುದರಿಂದ, ಬೋನಸ್ ಕಾಯಿದೆಯಲ್ಲಿ ನಮೂದಿಸಿರುವುದಕ್ಕಿಂತಲೂ ಹೆಚ್ಚು ಮಾಲಿಕರ ಲಾಭಾಂಶದಲ್ಲಿಯ ಪಾಲನ್ನ ಕಾರ್ಮಿಕರಿಗೆ ಕೊಡಬೇಕೆಂದು ಕೇಂದ್ರ-ರಾಜ್ಯ ಸರಕಾರಗಳನ್ನು ಒತ್ತಾಯಿಸುವ ನಿರ್ಣಯ ಸಮಾವೇಶದಲ್ಲಿ ಪಾಸಾಯಿತು. ತ್ರಿವೇದಿ-ರಾಮಾನುಜಮ್ ಕೂಡಿದ ಕುತಂತ್ರವನ್ನು ಬಯಲಿಗೆಳೆಯಲು ರಾಜಕೀಯ ಪ್ರಚಾರ-ಪ್ರಕ್ಷೋಭೆ ನಡೆಸಬೇಕೆಂದೂ ಸಮ್ಮೇಳನ ಕರೆಕೊಟ್ಟಿತು. ತಮಿಳುನಾಡಿನ ಕೇಂದ್ರ ಕಾರ್ಮಿಕ ಸಂಘಟನೆಗಳು, ಒಟ್ಟಾಗಿ ಈ ರೀತಿ ಸಮಾವೇಶ ಕರೆದು ಸಿಮೆಂಟ್ ಕೆಲಸಗಾರರಿಗೆ ಮಾರ್ಗದರ್ಶನ ಮಾಡಿದ್ದನ್ನು ಎಲ್ಲರೂ ಸ್ವಾಗತಿಸಿದ್ದಾರೆ.

●

ಅಪಪ್ರಚಾರಗಳನ್ನು ಸಿ. ಪಿ. ಐ. ನಿಲ್ಲಿಸಲಿ

(2ನೇ ಪುಟದಿಂದ)

ಅಥವಾ ಕೂಟವೆಂದರೆ ಅದು ಕಾರ್ಮಿಕ ವರ್ಗ, ರೈತರು ಮತ್ತು ಇತರೆ ಪ್ರಜಾಪ್ರಭುತ್ವವಾದಿ ಶಕ್ತಿಗಳ ಕೂಟವೇ ಹೊರತು ಅದು ಎಡ ಪಕ್ಷಗಳೂ ಮತ್ತು ಆಳುವ ವರ್ಗಗಳಿಗೆ ಸೇರಿದ ಕೆಲವು ಪಕ್ಷಗಳ ಕೂಟವಲ್ಲ. ಎಡ ಪಕ್ಷಗಳೂ, ಆಳುವ ವರ್ಗಗಳಿಗೆ ಸೇರಿದ ಕೆಲವು ಪಕ್ಷಗಳೂ ಸೇರಿಕೊಂಡು ರಚಿಸಿರುವ ಕೂಟವು ನಿಜವಾದ ಅರ್ಥದಲ್ಲಿ ಒಂದು ಸಂಯುಕ್ತರಂಗ. ಉದಾಹರಣೆಗೆ ಕೇರಳದಲ್ಲಿರುವ ಎಡ ಪ್ರಜಾಪ್ರಭುತ್ವರಂಗವೂ ಅಂತಹುದೇ ಒಂದು ಸಂಯುಕ್ತರಂಗ. ಅಂತಹ ಸಂಯುಕ್ತರಂಗಗಳ ಸರಕಾರಗಳಲ್ಲೂ ಸಿ.ಪಿ.ಐ. (ಎಂ) ಭಾಗವಹಿಸುವುದು ತನಗೆ ಸಾಕಷ್ಟು ಜನಬೆಂಬಲವಿದ್ದು ಸರಕಾರದ ಮೇಲೆ ಪ್ರಭಾವ ಬೀರುವುದು ಸಾಧ್ಯವಿದ್ದಾಗ ಮಾತ್ರ ಭೂಮಾಲಿಕ—ಬಂಡವಾಳಶಾಹಿ ಪಕ್ಷಗಳ, ಆಳುವ ವರ್ಗಗಳ ಧೋರಣೆಗಳಿಗೆ ವಿರುದ್ಧವಾದ ಧೋರಣೆ ಮತ್ತು ಸಂಯುಕ್ತ ಹೋರಾಟಗಳ ಮೂಲಕ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಒಗ್ಗೂಡಿಸುವುದೇ ಸಿ. ಪಿ. ಐ. (ಎಂ) ಹೇಳುವ ದಾರಿ.

ಎರಡು ಪಕ್ಷಗಳು ಜಂಟಿ ಸಮಾವೇಶದಲ್ಲಿ ಅಂಗೀಕರಿಸಿರುವ ಹೇಳಿಕೆಯಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆ ಬಗ್ಗೆ ಮತ್ತು ಇನ್ನೆಷ್ಟೋ ವಿಚಾರಗಳ ಬಗ್ಗೆ ಹೇಳುವಾಗ ತ್ರಿಪುರಾ, ಪಶ್ಚಿಮ ಬಂಗಾಲ ಮತ್ತು ಕೇರಳ ರಾಜ್ಯಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಸರಕಾರಗಳ ಸಾಧನೆಗಳ ಬಗೆಗಾಗಲಿ, ಮೇ 19 ರಂದು ನಡೆದ ಮಿನಿ ಸಾರ್ವತ್ರಿಕ ಚುನಾವಣೆಯಲ್ಲಿ ಪಶ್ಚಿಮ ಬಂಗಾಲದಲ್ಲಿ ಎಡರಂಗವು ಸಾಧಿಸಿರುವ ಅದ್ಭುತ ವಿಜಯ ಮತ್ತು ಕೇರಳದಲ್ಲಿ ಎಡ ಪ್ರಜಾಪ್ರಭುತ್ವರಂಗವು ಕಾಂಗ್ರೆ ನೇತೃತ್ವದ ಕಮ್ಯುನಿಸ್ಟ್ ವಿರೋಧಿ ಕೂಟಕ್ಕೆ ಪ್ರಬಲ ಸವಾಲನ್ನು ಒಡ್ಡಿ. ಕಾಂಗ್ರೆ ಕೂಟವು ಎಲ್ಲ ಸ್ಥಾನಗಳಲ್ಲಿ ಒಟ್ಟು 100000 ಮತಗಳಷ್ಟುಮಾತ್ರ ಹೆಚ್ಚು ಪಡೆದು ಅಧಿಕಾರಕ್ಕೆ ಬರಲು ಸಾಧ್ಯವಾದ ವಿಚಾರ — ಇವಾವುದರ ಬಗ್ಗೆಯೂ ಪ್ರಸ್ತಾಪವೇ ಇಲ್ಲ. ಇದು ಹೇಳಿಕೆಯಲ್ಲಿನ ಕೊರತೆಯ ಪ್ರಶ್ನೆಯಲ್ಲ. ಸಿ. ಪಿ. ಐ. (ಎಂ) ನೇತೃತ್ವದಲ್ಲಿ ಎಡ ಪ್ರಜಾಪ್ರಭುತ್ವ ಶಕ್ತಿಗಳನ್ನು ಒಗ್ಗೂಡಿಸುವ ದಿಸೆಯಲ್ಲಿ ಸಾಧಿಸಲಾಗಿರುವುದನ್ನೆ ಮರೆಮಾಚಿದಂತಾಗುತ್ತದೆ.

ಈ ಎಲ್ಲ ಕಾರಣಗಳಿಂದಲೇ ಸಿ. ಪಿ. ಐ. (ಎಂ) ರಾಜ್ಯ ಘಟಕವು ಜಂಟಿ ಸಮಾವೇಶವು ಅಂಗೀಕರಿಸಿದ ಹೇಳಿಕೆಯಿಂದ ತನ್ನನ್ನು ಪ್ರತ್ಯೇಕಿಸಿಗೊಂಡಿದೆ. ಹೇಳಿಕೆಯನ್ನು ತಯಾರಿಸುವ ಸಂದರ್ಭದಲ್ಲಿ ಈ ಮೇಲಿನ ವಿಚಾರಗಳ ಬಗ್ಗೆ ಸಿ. ಪಿ. ಐ (ಎಂ) ರಾಜ್ಯ ಸೆಕ್ರೆಟಾರಿಯೆಟ್ ಕೆಲವು ಪ್ರಶ್ನೆಗಳನ್ನು ಎತ್ತಿತ್ತು ಆದರೆ ಐಕ್ಯ ಕಾರ್ಯಾಚರಣೆಯ ಪ್ರಯತ್ನಕ್ಕೆ ಧಕ್ಕೆ ಬರಬಹುದೆಂಬ ಕಾರಣದಿಂದ ತನ್ನ ಅಭಿಪ್ರಾಯಗಳಿಗೆ ಪಟ್ಟು ಹಿಡಿಯಲಿಲ್ಲ. ಮುಂದೆ ಪಕ್ಷದ ಪೊಲಿಟ್‌ಬ್ಯೂರೊವು ಮಧ್ಯ ಪ್ರವೇಶ ಮಾಡಿದಾಗ ತಪ್ಪಿನ ಪೂರ್ಣ ಅರಿವುಂಟಾಯಿತು. ಮಾರ್ಕ್ಸ್‌ವಾದ–ಲೆನಿನ್‌ವಾದಗಳ ಆಧಾರದ ಕ್ರಾಂತಿಕಾರಿ ಪಕ್ಷಕ್ಕೆ ತಪ್ಪನ್ನು ಒಪ್ಪಿಕೊಳ್ಳಲೂ, ಸ್ವಯಂ ಟೀಕೆ ಮಾಡಲೂ ಭಯವಿಲ್ಲ. ಆದುದರಿಂದಲೇ ಸಿ.ಪಿ.ಐ.(ಎಂ) ರಾಜ್ಯ ಸಮಿತಿ ತಪ್ಪನ್ನು ಒಪ್ಪಿಕೊಂಡಿದೆ ಮತ್ತು ಸ್ವಯಂ ಟೀಕೆಯನ್ನು ಮಾಡುತ್ತಿದೆ.

ಒಂದು ವಿಚಾರದ ಬಗ್ಗೆ ಮತ್ತೊಮ್ಮೆ ಹೇಳಬೇಕಾಗಿದೆ. ಜಂಟಿ ಸಮಾವೇಶದಲ್ಲಿ ಅಂಗೀಕರಿಸಿರುವ ಹೇಳಿಕೆಯಿಂದ ತನ್ನನ್ನು ಪ್ರತ್ಯೇಕಿಸಿಕೊಂಡರೂ ಜಂಟಿ ಕಾರ್ಯಕ್ರಮಗಳಿಗೆ ಸಿ. ಪಿ. ಐ. (ಎಂ) ತಯಾರಿದೆ. ಆದರೆ ಈ ಜಂಟಿ ಕಾರ್ಯಕ್ರಮವನ್ನು ಕೇವಲ ಈ ಎರಡು ಪಕ್ಷಗಳಿಗೆ ಸೀಮಿತವಾಗಿರಿಸುವುದು ತಪ್ಪಾಗುತ್ತದೆ. ಈ ರೀತಿಯ ಕ್ರಮದಿಂದ ಎಡ ಪ್ರಜಾಪ್ರಭುತ್ವ ಶಕ್ತಿಗಳನ್ನು ಒಗ್ಗೂಡಿಸುವ ಕೆಲಸಕ್ಕೆ ಧಕ್ಕೆ ಉಂಟಾಗುತ್ತದೆ.

ಜಗತ್ತಿನಾದ್ಯಂತ ಮತ್ತು ಭಾರತ ದೇಶದೊಳಗೆ ಕಮ್ಯುನಿಸ್ಟ್ ಚಳುವಳಿಯಲ್ಲಿ ಬೆಳೆದು ಬಂದ ಪರಿಷ್ಕರಣವಾದ ಮತ್ತು ಎಡ ಪಂಥವಾದಗಳ ವಿರುದ್ಧ ತತ್ವಬದ್ಧವಾಗಿ ಸತತ ಹೋರಾಟ ನಡೆಸಿ, 'ಮಾರ್ಕ್ಸ್‌ವಾದ - ಲೆನಿನ್ ವಾದ'ಗಳ ಆಧಾರದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನು ಬೆಳೆಸಿ, ಮುನ್ನಡೆಸಿ, ಬಹಳಷ್ಟು ಯಶಸ್ಸನ್ನು ಸಾಧಿಸುವುದಕ್ಕೆ ಸರಿಯಾದ ಮುಖಂಡತ್ವವನ್ನು ಕೊಟ್ಟು, ದೇಶದಾದ್ಯಂತ ನಡೆಯುತ್ತಿರುವ ಸರ್ವಾಧಿಕಾರಿ ವಿರೋಧ ಹೋರಾಟ ಮತ್ತು ಎಡ ಪ್ರಜಾಪ್ರಭುತ್ವ ಶಕ್ತಿಗಳ ಒಗ್ಗಟ್ಟಿಗಾಗಿ ನಡೆಯುವ ಹೋರಾಟಗಳ ಮುಂಚೂಣಿಯಲ್ಲಿರುವಂತೆ ಮಾಡುವುದಕ್ಕೆ ಕಾರಣೀಭೂತವಾದ ಸಿ ಪಿ ಐ (ಎಂ) ಕೇಂದ್ರ ಮುಖಂಡತ್ವವನ್ನು ಟೀಕಿಸುವ ನೈತಿಕ ಹಕ್ಕು ರಾಜ್ಯ ಸಿ. ಪಿ. ಐ. ಮುಖಂಡತ್ವಕ್ಕೆ ಇಲ್ಲ.

○

ಬೆಂಗಳೂರು :

ಹೋಟೆಲ್ ಅಶೋಕಾ ಕಾರ್ಮಿಕರಿಂದ ಬೇಡಿಕೆ ದಿನಾಚರಣೆ

ಅಖಿಲ ಭಾರತ ಐ. ಟಿ. ಡಿ. ಸಿ. (ಇಂಡಿಯನ್ ಟೂರಿಸಮ್ ಡೆವ್ಲಪ್‌ಮೆಂಟ್ ಕಾರ್ಪೊರೇಷನ್) ಹೋಟೆಲ್‌ಗಳ ಕಾರ್ಮಿಕ ಸಂಘಗಳ ಜಂಟಿ ಕ್ರಿಯಾ ವೇದಿಕೆಯ ಆದೇಶದ ಮೇರೆಗೆ ಬೆಂಗಳೂರಿನ ಹೋಟೆಲ್ ಅಶೋಕಾದ ಕಾರ್ಮಿಕರು ಆಗಸ್ಟ್ 17 ರಂದು ಬೇಡಿಕೆ ದಿನಾಚರಣೆ ಆಚರಿಸಿದರು.

ಹೊಸ ಪರಿಷ್ಕರಣ ವೇತನ, 1981-82ನೇ ಸಾಲಿಗೆ 20% ಬೋನಸ್, 18 ದಿವಸ ಸಾರ್ವಜನಿಕ ಹಬ್ಬಗಳ ರಜೆ.... ಇತ್ಯಾದಿ ಬೇಡಿಕೆಗಳಿಗಾಗಿ ಒತ್ತಾಯಿಸಿ ಈ ಕಾರ್ಯಕ್ರಮ ನಡೆಯಿತು. ಬೇಡಿಕೆಗಳನ್ನೊಳಗೊಂಡ ಬ್ಯಾಡ್ಜಗಳನ್ನು ಧರಿಸಿಕೊಂಡೇ ಕಾರ್ಮಿಕರು ಕೆಲಸ ಮಾಡಿದರು.

ಮಧ್ಯಾಹ್ನ 12 ಘಂಟೆಗೆ ಹೋಟೆಲ್ ಮುಂಭಾಗದಲ್ಲಿ ಗೇಟ್ ಮೀಟಿಂಗ್ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸಿ.ಐ.ಟಿ.ಯು. ನೇತೃತ್ವದ ಸಂಘದ ಅಧ್ಯಕ್ಷ ಕಾಂ। ಟಿ. ಎಸ್. ಅನಂತ ರಾಮ್ ವಹಿಸಿದ್ದರು. ಕೊನೆಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ। ಸಿ. ರಾಮಯ್ಯ ವಂದನಾರ್ಪಣೆ ಮಾಡಿದರು.

○

ಕುಂದಾಪುರ :

ನೆರೆ ಸಂತ್ರಸ್ತರಿಗೆ ಹಂಚು ಕಾರ್ಮಿಕರ ನೆರವು

ಕುಂದಾಪುರದಲ್ಲಿ ಹಂಚು ಕಾರ್ಮಿಕರು ತಮ್ಮ ಸಂಘದ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರೆಯ ಮೇರೆಗೆ ನೆರೆ ಸಂತ್ರಸ್ತರಿಗೆ ಪರಿಹಾರ ಕೊಡುವ ಸಲುವಾಗಿ ಒಂದು ದಿವಸದ ಕೂಲಿಯನ್ನು ಸಂಗ್ರಹಿಸಲಾಗಿದ್ದು, ತಾರೀಖು 26-8-1982 ರಂದು ಕುಂದಾಪುರ ತಾಲ್ಲೂಕು ನೆರೆ ಪರಿಹಾರ ಸಮಿತಿಯ ಅಧ್ಯಕ್ಷರಾದ ಶ್ರೀಯುತ ಯಡ್ತ್ರೆ ರಿಮಂಜಯ್ಯಶೆಟ್ಟಿ ಅವರಿಗೆ ರೂಪಾಯಿ ಹತ್ತು ಸಾವಿರವನ್ನು ನೀಡಲಾಯಿತು.

ಈ ಸಂದರ್ಭದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕುಂದಾಪುರ ತಾಲ್ಲೂಕು ಸಮಿತಿಯ ಕಾರ್ಯದರ್ಶಿಯವರಾದ ಕಾಂ। ಅಬ್ರಹಾಂ ಕರ್ಕಡರವರು, ಕುಂದಾಪುರ ಡಿವಿಜನ್ ಹಂಚು ಕಾರ್ಮಿಕರ ಸಂಘದ ಕಾರ್ಯದರ್ಶಿಯವರಾದ ಕಾಂ। ಸಿ. ನಾರಾಯಣರವರು, ಸಿ. ಐ. ಟಿ. ಯು.ವಿನ ಜಿಲ್ಲಾ ಸಮಿತಿ ಕಾರ್ಯದರ್ಶಿಯವರಾದ ಕಾಂ। ಕೆ. ಶಂಕರ್ ಮತ್ತು ಇತರ ಕಾರ್ಯಕರ್ತರು ಉಪಸ್ಥಿತರಿದ್ದರು.

●

ಹೋರಾಟದ ಹಕ್ಕನ್ನು ಬಿಟ್ಟುಕೊಡುವುದಿಲ್ಲ

(1ನೇ ಪುಟದಿಂದ)

"ಕಾರ್ಮಿಕರನ್ನೂ ಮಾಲೀಕರನ್ನೂ ಸಮಾನವಾಗಿ ತೂಗುವ ಇನ್ನೊಂದು ಕುಯುತ್ನವನ್ನು ಸ್ವಲ್ಪ ನೋಡೋಣ: ಕನಿಷ್ಠ ಜೀವನ ಸೌಲಭ್ಯಗಳಿಂದ ವಂಚಿತವಾಗಿರುವ ಬಡ ಕಾರ್ಮಿಕನಿಗೂ ಮತ್ತು ಕಾರ್ಮಿಕರಿಗೆ ಮೋಸ ಮಾಡುತ್ತಾ ಸದಾ ಲಾಭದ ಬೇಟೆಯಾಡುವ ಮಾಲೀಕನಿಗೂ ಎಲ್ಲಿಯ ಸಮಾನ ಹೋಲಿಕೆ? ಈಗ 'ಅನುಚಿತ ಕಾರ್ಮಿಕ ವರ್ತನೆ'ಗಳು ಎಂಬ ಹೊಸ ಅಧ್ಯಾಯವನ್ನು ಸೇರಿಸಲಾಗಿದೆ. ಕಾರ್ಮಿಕನಿಗೂ ಮಾಲಿಕನಿಗೂ ಸಮಾನ ಶಿಕ್ಷೆ ವಿಧಿಸುವ ನಿಯಮಗಳು ಇದರಲ್ಲಿವೆ. ಆದರೆ ಇವುಗಳ ಮೂಲಕ ಕಾರ್ಮಿಕನನ್ನು ಮಾತ್ರ ಸುಲಭವಾಗಿ ಶಿಕ್ಷಿಸಬಹುದು. ಮಾಲೀಕ ಮಾತ್ರ ಸುಲಭವಾಗಿ ಶಿಕ್ಷೆಯಿಂದ ತಪ್ಪಿಸಿಕೊಳ್ಳಬಲ್ಲ. ಹಿಂದಿನ 30 ವರ್ಷಗಳಲ್ಲಿ ಎಂದಾದರೂ ಮಾಲೀಕ ಶಿಕ್ಷೆಗೆ ಒಳಗಾಗಿದ್ದು ನಾವು ಕಂಡಿದ್ದೇವೆಯೇ? ಅತಿ ದೊಡ್ಡ ಮೊತ್ತದಲ್ಲಿ ಕಾರ್ಮಿಕರ ಭವಿಷ್ಯ ನಿಧಿಯನ್ನು ಇ.ಎಸ್.ಐ. ಹಣವನ್ನು ನುಂಗಿ ಹಾಕಿದವರನ್ನು ಎಂದಾದರೂ ಶಿಕ್ಷಿಸಲಾಗಿದೆಯೇ? ಮಾಲೀಕರನ್ನು ನ್ಯಾಯದ ಕಟಕಟೆಗೆ ಎಳೆಯುವ ಧೈರ್ಯ ಸರ್ಕಾರಕ್ಕಿದೆಯೇ? ನಮ್ಮ ಚರಿತ್ರೆ ಹೀಗಿರುವಾಗ ಸರ್ಕಾರ ಹೇಳುತ್ತದೆ-'ನಾವು ಮಾಲೀಕರನ್ನೂ ಶಿಕ್ಷಿಸುತ್ತೇವೆಂದು. ಕಾರ್ಮಿಕ ವರ್ಗ ಇದನ್ನೆಂದೂ ನಂಬುವುದಿಲ್ಲ."

"ಸ್ವದೇಶೀ ಹತ್ತಿ ಗಿರಣಿಯಲ್ಲಿ 5 ತಿಂಗಳು ಸಂಬಳ ಸಿಗದ ಕಾರ್ಮಿಕರನ್ನು ಥಳಿಸಿದ ಮೇಲೆ 'ಕಾನೂನು ಮತ್ತು ಶಾಂತಿಯು' ಸೋಗು ಹಾಕಲಾಗುತ್ತದೆ. ಕಾನ್ಪುರದಲ್ಲಿ ಜೆ. ಕೆ. ಕಾರ್ಖಾನೆಯಲ್ಲಿ ಬೀಗ ಮುದ್ರೆಯಿದೆ. ಇದಕ್ಕೆ ಸರ್ಕಾರದಿಂದ ಅವರು ಅನುಮತಿ ಪಡೆದಿದ್ದಾರೇನು? ಅಲ್ಲಿನ ಮಾಲೀಕರಿಗೆ ಶಿಕ್ಷೆಯಾಗಿದೆಯೇ? ಅಂದ ಮೇಲೆ "ಕಾರ್ಮಿಕರನ್ನು ನ್ಯಾಯಬಾಹಿರ ಲಾಕ್‌ಔಟ್‌ಗಳಿಂದ ರಕ್ಷಿಸುತ್ತೇವೆಂದು ಸರ್ಕಾರ ಹೇಳಿಕೊಳ್ಳುವುದನ್ನು ಕಾರ್ಮಿಕ ವರ್ಗ ನಂಬಲು ಸಾಧ್ಯವೇ?"

"ಯಾವುದೇ ಕಾರ್ಮಿಕ ಅಥವಾ ಸಂಘದ ಪದಾಧಿಕಾರಿ ಈ ನಿಯಮಗಳ ಪ್ರಕಾರ ತಪ್ಪಿತಸ್ಥನೆಂದು ಸಿದ್ಧವಾದಲ್ಲಿ ಅವನು ಮುಂದೆಂದೂ ಕಾರ್ಮಿಕ ಸಂಘಗಳ ಪದಾಧಿಕಾರಿಯಾಗುವಂತಿಲ್ಲ. ಅಷ್ಟೇ ಅಲ್ಲದೆ ಆ ಸಂಘದ ನೋಂದಣಿಯನ್ನು ರದ್ದುಪಡಿಸಲಾಗುವುದು. ಇಂತಹುದೇ ಶಿಕ್ಷೆಯನ್ನು ಆಡಳಿತ ವರ್ಗದವರಿಗಾಗಲೀ ಮಾಲೀಕರಿಗಾಗಲೀ ವಿಧಿಸಲು ಸರ್ಕಾರ ತಯಾರಿದೆಯೇನು? ಅನುಚಿತವಾಗಿ ವರ್ತಿಸುವ ಅಧಿಕಾರಿಯಾಗಲೀ ಮಾಲೀಕನಾಗಲೀ ಮುಂದೆಂದೂ ಡೈರೆಕ್ಟರನಾಗಲೀ ಅಥವಾ ಇನ್ನಾವುದೇ ಹುದ್ದೆಯಲ್ಲಾಗಲೀ ಇರಬಾರದೆಂದು ವಿಧಿಸುವ ಧೈರ್ಯ ಸರ್ಕಾರಕ್ಕೆ ಯಾಕಿಲ್ಲ?"

"ಇದು ಸರ್ಕಾರದ ನ್ಯಾಯದ ನೀತಿ ಕಾರ್ಮಿಕ ವರ್ಗ ಪ್ರಚೋದಿತಗೊಂಡಿದೆಯೆಂದು ಸರ್ಕಾರ ಭಾವಿಸಿದೆ. 1928ರಲ್ಲಿ ಲಾಹೋರ್‌ನಲ್ಲಿ ಯುವ ಸಮ್ಮೇಳನವನ್ನು ಉದ್ದೇಶಿಸಿದ ಪಂಡಿತ ನೆಹರೂ ಹೇಳಿದ ಮಾತುಗಳೆಡೆ ಸರ್ಕಾರದ ಗಮನ ಸೆಳೆಯಬೇಕಾಗಿದೆ ಅವರೆಂದರು "ನಾವು ಜನತೆಯನ್ನು ಪ್ರಚೋದಿಸುತ್ತಿಲ್ಲ; ಹಸಿವು, ಬಡತನ ನಿರುದ್ಯೋಗ ಇವುಗಳೇ ಜನತೆಯನ್ನು ಪ್ರತಿಭಟನೆಯ ದಾರಿಯತ್ತ ಎಳೆಯುತ್ತಿದೆ." ಇವು ನೆಹರೂರವರ ಮಾತುಗಳು.

"ಇಂದು ಸ್ವಾತಂತ್ರ್ಯ ಸಿಕ್ಕಿ 33 ವರ್ಷಗಳಾದ ನಂತರ, ಸರ್ಕಾರದ ನೀತಿಯಿಂದಾಗಿ, ಸರ್ಕಾರವೇ ಜನರನ್ನು ಪ್ರತಿಭಟನೆಯ ಬಂಡಾಯದ ದಾರಿಗೆಳೆಯುತ್ತಿದೆ. ಇಂದಿನ ಕಾರ್ಮಿಕ ವರ್ಗದ ಸ್ಥಿತಿಯ ಬಗೆಗಿನ ಈ ವರದಿ ನೋಡಿ—

"ಭಾರತವೊಂದರ ಹೊರತಾಗಿ ಬೇರೆಲ್ಲ ಮುಂದುವರಿಯುತ್ತಿರುವ ದೇಶಗಳಲ್ಲಿ ಫ್ಯಾಕ್ಟರಿ ವಿಭಾಗಗಳಲ್ಲಿ 'ನಿಜ ವೇತನ' ಹೆಚ್ಚುತ್ತಿದೆ. 1956-60ರಲ್ಲಿ ನಿಜ ವೇತನದ ಬದಲಾವಣೆಯ ಪ್ರಮಾಣ —.09 ಆಗಿತ್ತು- 1960-64ರಲ್ಲಿ ಇದು ಶೇ—2.6 ಆಗಿತ್ತು. ಅಂದಿನಿಂದ ಗಮನಾರ್ಹ ಬದಲಾವಣೆಯೇನೂ ಇದುವರೆಗೆ ಕಂಡು ಬಂದಿಲ್ಲ."

"ಇದು ಯಾವುದೇ ಮಾರ್ಕ್ಸ್‌ವಾದಿ ಅರ್ಥಶಾಸ್ತ್ರಜ್ಞ ಹೇಳಿದ್ದಲ್ಲ ಬದಲಾಗಿ ಸರ್ಕಾರದ ಕಾರ್ಮಿಕ ಇಲಾಖೆಯಿಂದ ಹೊರಬರುವ ಮೇ ತಿಂಗಳ ಪತ್ರಿಕೆಯಲ್ಲಿದೆ. ಇದರೊಂದಿಗೆ, ಬೆಲೆ ಸೂಚ್ಯಂಕಗಳನ್ನು ನಿರ್ಧರಿಸುವ ಸರ್ಕಾರದ ಕ್ರಮವೂ ವಂಚನೆಯಿಂದ ಕೂಡಿದೆ ಎಂಬುದನ್ನು ನೆನಪಿನಲ್ಲಿಡಬೇಕು 'ರಥ್' ಸಮಿತಿಯೂ ಇದು ತಪ್ಪುಗಳಿಂದ ಕೂಡಿದೆ ಎಂದೆನ್ನುತ್ತದೆ. ಆದರೆ ಸರ್ಕಾರ ಈ ತಪ್ಪನ್ನು ತಿದ್ದಲು ಸಿದ್ಧವಾಗಿಲ್ಲ."

"ದೇಶದ ಎಲ್ಲೆಡೆ ಹರಿಜನರ ಮೇಲೆ, ದಲಿತರ ಮೇಲೆ ದಬ್ಬಾಳಿಕೆ ನಡೆಯುತ್ತಿದೆ. ಕೃಷಿ ಕಾರ್ಮಿಕರ ಸಂಘಟನೆಯ ಮೇಲೆ ಪೋಲೀಸು ಧಾಳಿ ನಡೆಸಲಾಗುತ್ತಿದೆ ಕೃಷಿ ಕಾರ್ಮಿಕರಿಗೆ ಕನಿಷ್ಠ ವೇತನದ ಸೌಲಭ್ಯ ಜಾರಿ ಮಾಡಲಾಗಿಲ್ಲ ಮುಂಬೈಯಲ್ಲಿನ ಗಿರಣಿ ಕಾರ್ಮಿಕರ ಮುಷ್ಕರದ ಬಗ್ಗೆ ಸರ್ಕಾರದ ನಿಲುವೇನೆಂದು ಎಲ್ಲರಿಗೂ ತಿಳಿದಿರುವ ವಿಷಯ. ಸರ್ಕಾರದ ಚರಿತ್ರೆ ಈ ರೀತಿ ಇರುವಾಗ ಕಾರ್ಮಿಕರ ಹಿತದ ಬಗ್ಗೆ ಹೇಳುವ ಅದರ ಮಾತುಗಳೆಲ್ಲಾ ಬರಿಯ ಬೂಟಾಟಿಕೆ."

"ಕ್ರೂರವಾದ ಕಾನೂನುಗಳನ್ನು ತಂದು ಕಾರ್ಮಿಕರ ಸಂಘಟನೆಯನ್ನು ಮುರಿಯಬಹುದೆಂದು ಸರ್ಕಾರ ಭಾವಿಸಿದ್ದರೆ ಅದು ತಪ್ಪು ಭಾವನೆ. ಕಾರ್ಮಿಕರು ತಮ್ಮ ಅಪಾರ ತ್ಯಾಗ ಮತ್ತು ಸಾಹಸದಿಂದ ಹೋರಾಟಗಳ ಮೂಲಕ ತಮ್ಮ ಸಂಘಟನೆಯನ್ನು ಕಟ್ಟಿಕೊಂಡಿದ್ದಾರೆ. ತನ್ನೆಲ್ಲಾ ಬೆಂಬಲಿಗರು ಮಿತ್ರರನ್ನು ಕೂಡಿಕೊಂಡು ಕಾರ್ಮಿಕ ವರ್ಗ ಹೋರಾಟ ನಡೆಸಿಯೇ ತೀರುವುದು. ಕಾರ್ಮಿಕರಾದ ನಾವು ನಮ್ಮ ಪ್ರಾಣವನ್ನಾದರೂ ಕೊಟ್ಟೇವು ಆದರೆ ಹೋರಾಟದ ಹಕ್ಕನ್ನು ಮಾತ್ರ ಬಿಟ್ಟುಕೊಡಲಾರೆವು."

●

ಶ್ರೀಮತಿ ರಾಜಮ್ಮ ಅಧ್ಯಕ್ಷೆಯಾಗಿ ಆಯ್ಕೆ

(1ನೇ ಪುಟದಿಂದ)

ಮಂಡಲಿಯೊಡನೆ ಎರಡು ಸುತ್ತು ಮಾತುಕತೆ ನಡೆದರೂ ಪ್ರಯೋಜನವಾಗಿಲ್ಲವೆಂದರು.

ಅಖಿಲ ಭಾರತ ಮಟ್ಟದಲ್ಲಿ ಕೈಗಾರಿಕಾವಾರು ಹೋರಾಟದಲ್ಲಿ ಪಾಲ್ಗೊಳ್ಳುವುದರ ಅವಶ್ಯಕತೆಯ ಬಗ್ಗೆ ಗಮನ ಸೆಳೆದ ಕಾಂ। ಸೂರಿಯವರು, ಪ್ರಸಕ್ತ ಸಂಘಗಳ ಪೈಪೋಟಿಯಲ್ಲಿ ಕಾರ್ಮಿಕರ ಒಗ್ಗಟ್ಟಿಗೆ ಧಕ್ಕೆಯಾಗಿದ್ದು, ಆಡಳಿತ ಮಂಡಳಿಗೆ ಇದರಿಂದ ಅನುಕೂಲವಾಗಿದೆ ಎಂದು ಆಪಾದಿಸಿದರು.

ಕಾರ್ಮಿಕರ ಐಕ್ಯತೆಯನ್ನು ಕಾಪಾಡಲು, ಐಕ್ಯ ಹೋರಾಟಕ್ಕೆ ಮುನ್ನಡೆಯಲು ಕಬ್ಬಿಣ ಕಾರ್ಖಾನೆಯಲ್ಲಿ 'ಉಕ್ಕು ಕಾರ್ಮಿಕರ ಒಕ್ಕೂಟ'ವೆಂಬ ವೇದಿಕೆ ಸ್ವಾಗತನೀಯ ಎಂದ ಕಾಂ। ಸೂರಿಯವರು ಆಗಸ್ಟ್ 30 ರಂದು ನಡೆಯಲಿದ್ದ ಚುನಾವಣೆಯಲ್ಲಿ ಈ ವೇದಿಕೆಯ ಅಭ್ಯರ್ಥಿಗಳನ್ನು ಚುನಾಯಿಸಲು ಮನವಿ ಮಾಡಿದ್ದರು.

●

'ವಿಧಾನ ಸೌಧ ಚಲೋ' ಕಾರ್ಯಕ್ರಮ ಮುಂದಕ್ಕೆ

ಪ್ರಾಂತ ರೈತ ಸಂಘದ ಕರೆಯ ಮೇರೆಗೆ ಆಗಸ್ಟ್ ಕೊನೆಯ ವಾರದಲ್ಲಿ ನಡೆಯಲಿದ್ದ ವಿಧಾನ ಸೌಧ ಚಲೋ ಕಾರ್ಯಕ್ರಮವನ್ನು ಮುಂದೂಡಲಾಗಿದೆ. ಸಹಿ ಸಂಗ್ರಹ ಕಾರ್ಯ ಪೂರ್ತಿಯಾಗಿ ಪೂರೈಸಿಲ್ಲವಾದ್ದರಿಂದ ಈ ಕ್ರಮ ಕೈಗೊಳ್ಳಲಾಗಿದೆ.

ಪ್ರಾಂತ ರೈತ ಸಂಘದ ಕಾರ್ಯಕಾರಿ ಸಮಿತಿಯು ಸಧ್ಯದಲ್ಲೆ ಸಭೆ ಸೇರಿ ದಿನಾಂಕವನ್ನು ಗೊತ್ತು ಮಾಡಲಿದೆ.

○

ಓರಿಸ್ಸಾ ಪ್ರವಾಹ: ಸಾವಿರಕ್ಕೂ ಮಿಕ್ಕಿ ಸಾವು

ಓರಿಸ್ಸಾನಲ್ಲಿ ಅತ್ಯಂತ ಭೀಕರ ಪ್ರವಾಹದಿಂದಾಗಿ ಸಾವಿರಕ್ಕೂ ಮಿಕ್ಕಿ ಜನ ಸತ್ತಿದ್ದು, ಲಕ್ಷಾಂತರ ಜನ ಮನೆಮಾರು ಕಳೆದುಕೊಂಡಿರುವ ದುರಂತ ಘಟನೆ ವರದಿಯಾಗಿದೆ. ಎಂಟು ಕರಾವಳಿ ಜಿಲ್ಲೆಗಳನ್ನು ಆವರಿಸಿರುವ ಪ್ರವಾಹದಲ್ಲಿ ಸಾವಿರಾರು ಹಳ್ಳಿಗಳು ಜಲಾವೃತವಾಗಿವೆ.

ಬಿಹಾರದ ಪಾಟ್ನಾನಗರ, ಉತ್ತರ ಪ್ರದೇಶದ ವಾರಣಾಸಿ ಮತ್ತು ಅಲಹಾಬಾದ್ ನಗರಗಳೂ ಪ್ರವಾಹಕ್ಕೆ ಸಿಲುಕಿದ್ದ ಪರಿಸ್ಥಿತಿ ಗಂಭೀರವಿದೆ.

ಓರಿಸ್ಸಾ, ಬಿಹಾರ ಮತ್ತು ಯು.ಪಿ.ಯ ಪ್ರವಾಹ ಪೀಡಿತ ನಗರ-ಹಳ್ಳಿಗಳಲ್ಲಿ ತಕ್ಷಣ ಪರಿಹಾರ ಕಾರ್ಯ ಕೈಗೊಂಡು, ತಕ್ಷಣ ನೊಂದವರಿಗೆ ಸೂಕ್ತ ಪರಿಹಾರ ನೀಡಬೇಕೆಂದೂ ಬೆಂಗಳೂರಿನಲ್ಲಿ ಸೆ. 2 ರಂದು ಸಭೆ ಸೇರಿದ್ದ ಸಿ. ಪಿ. ಐ. (ಎಂ) ರಾಜ್ಯ ಸೆಕ್ರೆಟಾರಿಯೇಟ್ ಒತ್ತಾಯಿಸಿದೆ.

ಮೊದಲೇ ಸುಳಿವು ಸಿಕ್ಕಿದ್ದರೂ ಪ್ರವಾಹ ಮುನ್ನೆಚ್ಚರಿಕೆ ವ್ಯವಸ್ಥೆ ಸಾಧ್ಯವಾದೆಲ್ಲ ನಿವಾರಣೋಪಾಯ ಕೈಗೊಳ್ಳದಿದ್ದುದು ಖಂಡನೀಯ ಎಂದು ಸೆಕ್ರೆಟಾರಿಯೇಟ್ ತಿಳಿಸಿದೆ.

1978ರಲ್ಲೇ ಐದು ವರ್ಷದಲ್ಲಿ ಪೂರ್ಣಗೊಳ್ಳಬೇಕಾದಂಥ ಪ್ರವಾಹ ನಿಯಂತ್ರಣ ಸಮಗ್ರ ಯೋಜನೆಯೊಂದನ್ನು ರೂಪಿಸಿದ್ದರೂ ಅದು ಕಾರ್ಯಗತವಾಗಿಲ್ಲ. ಮುಂಜಾಗರೂಕತೆ ವಹಿಸಿದ್ದರೆ ಅಪಾರ ಸಾವು–ನೋವು, ಕೋಟ್ಯಾಂತರ ರೂ. ಹಾನಿಯನ್ನು ತಪ್ಪಿಸಬಹುದಾಗಿತ್ತು ಎಂದು ಸೆಕ್ರೆಟಾರಿಯೇಟ್ ತಿಳಿಸಿದೆ.

●

ಪತ್ರಕರ್ತರ ಮುಷ್ಕರಕ್ಕೆ ಬೆಂಬಲ

ಸೆಪ್ಟೆಂಬರ್ 2 : ಬಿಹಾರದ 'ಕರಾಳ' ಪತ್ರಿಕಾ ಮಸೂದೆ ಹಾಗೂ ಕೆಲವು ರಾಜ್ಯಗಳಲ್ಲಿ ಜಾರಿಯಲ್ಲಿರುವ ಪತ್ರಿಕಾ ವಿರೋಧಿ ಕಾನೂನುಗಳ ವಿರುದ್ಧ ದೇಶದಾದ್ಯಂತ ಪತ್ರಕರ್ತರು ಸೆ. 3 ರಂದು ನಡೆಸಲಿರುವ ಮುಷ್ಕರಕ್ಕೆ ಇಂದು ಬೆಂಗಳೂರಿನಲ್ಲಿ ಸಭೆ ಸೇರಿಸಿದ ಸಿ. ಪಿ. ಐ. (ಎಂ) ರಾಜ್ಯ ಸೆಕ್ರೆಟಾರಿಯೇಟ್ ತನ್ನ ಸಂಪೂರ್ಣ ಬೆಂಬಲ ಘೋಷಿಸಿದೆ.

ಪ್ರಜಾಪ್ರಭುತ್ವದ ಆಧಾರಸ್ತಂಭಗಳಲ್ಲೊಂದಾದ ಪತ್ರಿಕಾ ಸ್ವಾತಂತ್ರ್ಯಕ್ಕೆ ಗಂಡಾಂತರ ಬಂದಿರುವಾಗ ಪತ್ರಕರ್ತರು ಪ್ರತಿಭಟಿಸಲು ನಿರ್ಧರಿಸಿದ್ದು ಸ್ವಾಗತನೀಯ ಎಂದು ಸೆಕ್ರೆಟಾರಿಯೇಟ್ ತಿಳಿಸಿದೆ.

●

ತ್ರಿಪಕ್ಷ ಸಭೆಗೆ ಬಹಿಷ್ಕಾರ

ಸೆಪ್ಟೆಂಬರ್ 17 ಮತ್ತು 18 ರಂದು ನಡೆಯಲಿರುವ ರಾಷ್ಟ್ರೀಯ ತ್ರಿಪಕ್ಷೀಯ ಕಾರ್ಮಿಕ ಸಮ್ಮೇಳನವನ್ನು ಸಿ.ಐ.ಟಿ.ಯು. ಒಳಗೊಂಡು ಎಂಟು ಪ್ರಮುಖ ಕೇಂದ್ರ ಕಾರ್ಮಿಕ ಸಂಘಟನೆಗಳು ಬಹಿಷ್ಕರಿಸಿವೆ

ಸರಕಾರ ಅನುಸರಿಸುತ್ತಿರುವ ಕಾರ್ಮಿಕ ವಿರೋಧಿ ಧೋರಣೆಯನ್ನು ಪ್ರತಿಭಟಿಸಿ ದೆಹಲಿಯಲ್ಲಿ ಸೆಪ್ಟೆಂಬರ್ 2 ರಂದು ನಡೆದ ಎನ್.ಸಿ.ಸಿ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಯಿತು.

●

ಮಂಗಳೂರು :

ಬಸ್ ಸಿಬ್ಬಂಧಿಗಳ ಮಿಂಚಿನ ಮುಷ್ಕರ

ವಿದ್ಯಾರ್ಥಿಯೊಬ್ಬನು ದಿನನಿತ್ಯ ತನ್ನ ಬಸ್ ಪಾಸನ್ನು ದುರುಪಯೋಗ ಮಾಡುತ್ತಿರುವುದನ್ನು ಆಕ್ಷೇಪಿಸಿದಕ್ಕಾಗಿ ಬಸ್ ಚಾಲಕ ಮತ್ತು ಕಂಡಕ್ಟರುಗಳ ಮೇಲೆ ಕಿಡಿಗೇಡಿಗಳು ಹಲ್ಲೆ ನಡೆಸಿದ ಘಟನೆ ವರದಿಯಾಗಿದೆ.

ಪ್ರಾಣ ರಕ್ಷಣೆಗಾಗಿ ಹಲ್ಲೆ ನಡೆಸಿದ ವಿದ್ಯಾರ್ಥಿಯೊಬ್ಬನ ಸಮೇತ ಬಸ್ಸನ್ನು ಪೋಲಿಸ್ ಠಾಣೆಗೆ ಕರೆದೊಯ್ದರೆ, ಪೋಲಿಸರು ಅಪಾದಿತ ವಿದ್ಯಾರ್ಥಿಯ ಮೇಲೆ ಕ್ರಮಕೈಗೊಳ್ಳುವುದು ಬಿಟ್ಟು, ಬಸ್ ಚಾಲಕರ ಮೇಲೇ ಕೇಸ್ ದಾಖಲು ಮಾಡಿದರು. ಇದು ನಡೆದದು ಆಗಸ್ಟ್ 20 ರಂದು.

ಪೋಲಿಸರ ವರ್ತನೆಯನ್ನು ಪ್ರತಿಭಟಿಸಿ ತಕ್ಷಣ ಮಿಂಚಿನ ಮುಷ್ಕರ ನಡೆಸಲಾಯಿತು. ಹಲ್ಲೆಗೊಳಗಾದ ಡ್ರೈವರ್ ಶ್ರೀ ರಾಜೀವಶೆಟ್ಟಿ ಅವರು ಮೋಟಾರ್ ಟ್ರಾನ್ಸ್‌ಪೋರ್ಟ್ ಅ್ಯಂಡ್ ಇಂಜಿನೀಯರಿಂಗ್ ವರ್ಕರ್ಸ್ ಯೂನಿಯನ್ನಿನ ಉಪಾಧ್ಯಕ್ಷರಾಗಿದ್ದಾರೆ.

ಕೊನೆಗೆ ಜಿಲ್ಲಾ ಪೋಲಿಸ್ ಅಧಿಕಾರಿಯವರ ಕಚೇರಿಯಲ್ಲಿ ನಡೆದ ಮಾತುಕತೆಯಲ್ಲಿ ಡ್ರೈವರನ ಮೇಲೆ ಹಾಕಲಾಗಿದ್ದ ಕೇಸನ್ನು ಹಿಂತೆಗೆದುಕೊಂಡು ತಪ್ಪಿತಸ್ತ ವಿದ್ಯಾರ್ಥಿಗಳ ಮೇಲೆ ಕ್ರಮಕೈಗೊಳ್ಳುವ ಭರವಸೆ ನೀಡಿದ ನಂತರ ಮುಷ್ಕರ ಹಿಂತೆಗೆದುಕೊಳ್ಳಲಾಯಿತು.

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053 Editorial and managerial office :L-56, K. V. Temple Street ,Sultanpet, Bangalore-560 053. Phone-24154. Printed at Ravee Traders, No. 8/1, J. M. Lane, Balepet Cross, Bangalore-560 053. EDITOR : M. K. BHAT.